# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಜೂನ್ 04, 2022

ಸಂಪುಟ : 49 ಸಂಚಿಕೆ : 21 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com





ಪಠ್ಯ ಮರು ಪರಿಷ್ಕರಣಾ ಸಮಿತಿ ರದ್ದುಪಡಿಸಲು ಆಗ್ರಹಿಸಿ ಬಸವ ಪರ ಮತ್ತು ಕನ್ನಡ ಪರ ಸಂಘಟನೆಗಳ ನೇತೃತ್ವದಲ್ಲಿ ಶುಕ್ರವಾರ ಪ್ರತಿಭಟನೆ ನಡೆಯಿತು.

# ನಗರೋತ್ಥಾನ : 2,993 ಕೋಟಿ ಕಾಮಗಾರಿಗಳಿಗೆ ಅನುಮೋದನೆ

ಬೆಂಗಳೂರು, ಜೂ. 3 - ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯ 4ನೇ ಹಂತದಲ್ಲಿ ರಾಜ್ಯದ 291 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೈಗೊಳ್ಳಲಿರುವ 2,993 ಕೋಟಿ ರೂ.ಗಳ ಕಾಮಗಾರಿಗಳ ಕ್ರಿಯಾ ಯೋಜನೆಗಳಿಗೆ ಪೌರಾಡಳಿತ ಇಲಾಖೆ ಅನುಮೋದನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದೆ.

ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವ ಎಂಟಿಬಿ ನಾಗರಾಜು ಅವರ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ಇಂದು ನಡೆದ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ 4ನೇ ಹಂತದ ಯೋಜನೆಗಳ ರಾಜ್ಯ ಮಟ್ಟದ ಸಮಿತಿ ಸಭೆಯು 9 ಜಿಲ್ಲೆಗಳ 503.25 ಕೋಟಿ ರೂ.ಗಳ ಕ್ರಿಯಾ ಯೋಜನೆಗಳಿಗೆ ಒಪ್ಪಿಗೆ ನೀಡಿತು.

ಸಭೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯ 80.75 ಕೋಟಿ. ರೂ, ಬೆಂಗಳೂರು ನಗರ ಜಿಲ್ಲೆಯ

**ಈ ಹಣದಲ್ಲಿ 2022-23 ರಿಂದ 2023-24ನೇ ಸಾಲಿನ ಹಣಕಾಸು ವರ್ಷದವರೆಗೆ ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ಮಳೆ ನೀರು ಚರಂಡಿ ಅಭಿವೃದ್ಧಿ ಮತ್ತು ಕಟ್ಟಡ ನಿರ್ಮಾಣ ಹಾಗೂ ಇತರೆ ಕಾಮಗಾರಿಗಳು ನಡೆಯಲಿವೆ.**

123.25 ಕೋಟಿ ರೂ., ಕೋಲಾರ ಜಿಲ್ಲೆ (ಬಂಗಾರ ಪೇಟೆ ಪುರಸಭೆ ಮಾತ್ರ):8.5 ಕೋಟಿ ರೂ., ತುಮಕೂರು ಜಿಲ್ಲೆಯ (ತಿಪಟೂರು ನಗರ ಸಭೆ ಮತ್ತು ಹುಳಿಯಾರ್ ಪಟ್ಟಣ ಪಂಚಾಯಿತಿ ಹೊರತು ಪಡಿಸಿ) 72.25 ಕೋಟಿ ರೂಪಾಯಿ, ಹಾಸನ ನಗರ ಸಭೆಗೆ ಹೆಚ್ಚುವರಿ ಮೊತ್ತ 6 ಕೋಟಿ ರೂ., ಬೆಳಗಾವಿ (ಚಿಕ್ಕೋಡಿ ಪುರಸಭೆ ಮಾತ್ರ) 8.5 ಕೋಟಿ ರೂ., ಉತ್ತರ ಕನ್ನಡ (ಕಾರವಾರ, ದಾಂಡೇಲಿ, ಕುಮಟ, ಅಂಕೋಲ, ಹೊನ್ನಾವರ ನಗರ ಸ್ಥಳೀಯ ಸಂಸ್ಥೆಗಳು ಮಾತ್ರ) 80.75 ಕೋಟಿ ರೂ. ಹಾಗೂ ಕಲಬುರಗಿ ಜಿಲ್ಲೆಯ 97.75 ಕೋಟಿ ರೂ.ಗಳ ಕ್ರಿಯಾ ಯೋಜನೆಗಳಿಗೆ ಅನುಮೋದನೆ ದೊರೆತಿದೆ.

ಇದರಿಂದಾಗಿ ಈವರೆಗೆ ರಾಜ್ಯದ 291 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೈಗೊಳ್ಳಲಿರುವ 2993 ಕೋಟಿ ರೂಪಾಯಿ ಕಾಮಗಾರಿಗಳ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಿದಂತಾಗಿದೆ.

ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ 4ನೇ ಹಂತದ ಯೋಜನೆಯ 3885 ಕೋಟಿ ರೂ. ಮೊತ್ತದ ಕ್ರಿಯಾ ಯೋಜನೆಗಳಿಗೆ ರಾಜ್ಯ ಸಚಿವ ಸಂಪುಟ ಕಳೆದ ಜನವರಿಯಲ್ಲಿ ಅನುಮೋದನೆ ನೀಡಿತ್ತು. ಅದಕ್ಕೆ ಪೂರಕವಾಗಿ ಅನುಮೋದನೆಗಾಗಿ ಜಿಲ್ಲಾಧಿಕಾರಿಗಳ ಮೂಲಕ (4ನೇ ಪುಟಕ್ಕೆ)

## ಮಕ್ಕಳಿಗೆ ಮೂಲ ವಿಚಾರಗಳನ್ನು ತಿದ್ದದೆ ವಾಸ್ತವ ಕಟ್ಟಿಕೊಡಬೇಕು



ದಾವಣಗೆರೆ, ಜೂ.3- ರಾಜ್ಯದಲ್ಲಿ ಪಠ್ಯ ಪುಸ್ತಕ ಪರಿಷ್ಕರಣೆ ವಿವಾದ ದಿನ ಕಳೆದಂತೆ ಬಹಳಷ್ಟು ತಿರುವು ಪಡೆದುಕೊಂಡಿದೆ. ಆದರೆ ಮಕ್ಕಳಿಗೆ ಮೂಲ ವಿಚಾರಗಳನ್ನು ತಿದ್ದಿ, ತೀಡದೇ ವಾಸ್ತವವಾಗಿ ಕಟ್ಟಿಕೊಡುವಂತಹ ಪ್ರಯತ್ನ ಆಗಬೇಕು ಎಂದು ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಅಭಿಪ್ರಾಯಪಟ್ಟರು.

ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲೆಂದು ಇಂದು ನಗರಕ್ಕೆ ಆಗಮಿಸಿದ್ದ ಶ್ರೀಗಳು, ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಮಾತನಾಡಿದರು.

ಈಗಾಗಲೇ ಪಠ್ಯ ಪುಸ್ತಕದ ವಿಷಯ ಬೇರೆ ಸ್ವರೂಪ ಪಡೆದಿದೆ. ವಾದ-ವಿವಾದಗಳು ಪೂರ್ಣಗೊಂಡು ಶಾಂತಿ ವಾತಾವರಣ ನಿರ್ಮಾಣ ಆಗಬೇಕು. ಮಕ್ಕಳ ಕಲಿಕೆಗೆ ಪೂರಕ ವಾತಾವರಣ ಉಂಟಾಗಬೇಕು ಎಂದು ಆಶಿಸಿದರು. ಈಗಾಗಲೇ ಶಿಕ್ಷಣ ತಜ್ಞರ ಸಮಿತಿ ಇದೆ. ಅದಕ್ಕೆ ಅಗತ್ಯ ಮಾರ್ಗದರ್ಶನ ಮಾಡಿಕೊಂಡು ಬರಲಾಗುತ್ತಿದೆ. ಪಠ್ಯದಲ್ಲಿ ನೈತಿಕ ಶಿಕ್ಷಣದ ಕೊರತೆ ಹೆಚ್ಚಾಗಿ ಕಾಣಿಸುತ್ತಿದೆ. ಮಕ್ಕಳಿಗೆ ಯಾವುದೇ ವಿಷಯ ನೈತಿಕ ಪ್ರಜ್ಞೆ ಜಾಗೃತಗೊಳಿಸುವ ನೈತಿಕ ಶಿಕ್ಷಣದ ಪಾಠವನ್ನು ಹೆಚ್ಚು ಹೆಚ್ಚು ಅಳವಡಿಸುವ ಪ್ರಯತ್ನ ಮಾಡಬೇಕು ಎಂದು ತಿಳಿಸಿದರು.

ಬಸವಣ್ಣನ ವಚನಗಳನ್ನು ಯಾರಿಂದಲೂ ತಿದ್ದಲು ಸಾಧ್ಯವಿಲ್ಲ. ಹಾಗೇನಾದರೂ (3ನೇ ಪುಟಕ್ಕೆ)

## ನಾಳೆ ಕೋಟಿ ವೃಕ್ಷ ಆಂದೋಲನ

ಬೆಂಗಳೂರು, ಜೂ.3 - ಕೃಷಿ ಇಲಾಖೆ ಜಲಾನಯನ ಇಲಾಖೆ ಯಿಂದ ಇದೇ ಮೊದಲ ಬಾರಿಗೆ ಜೂನ್ 5ರಂದು ಕೋಟಿ ವೃಕ್ಷ ಆಂದೋಲನ ಹಮ್ಮಿಕೊಳ್ಳಲಾಗಿದೆ.

ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ತುಮಕೂರಿನಲ್ಲಿ ಕೋಟಿ ವೃಕ್ಷ ಆಂದೋಲನ ಹಮ್ಮಿಕೊಳ್ಳಲಾಗಿದ್ದು, ಆಂದೋಲನಕ್ಕೆ ರಾಜ್ಯದ ಕೃಷಿ ಸಚಿವ ಬಿ.ಸಿ.ಪಾಟೀಲರು ಚಾಲನೆ ನೀಡಲಿದ್ದಾರೆ. ಅಂದು ರಾಜ್ಯದ ಎಲ್ಲಾ ಕೃಷಿ ಇಲಾಖೆ ಆವರಣ, ರೈತರ ಹೊಲಗಳ ಬದು, ಎಲ್ಲಾ ಸರ್ಕಾರಿ ಇಲಾಖೆ ಆವರಣಗಳಲ್ಲಿ ಸಸಿ ನೆಡುವ ಮೂಲಕ ಪರಿಸರ ಪ್ರೇಮ (2ನೇ ಪುಟಕ್ಕೆ)

## ಬಿಜೆಪಿ ಆದಾಯ 80% ಇಳಿಕೆ

ನವದೆಹಲಿ, ಜೂ. 3- ಚುನಾವಣಾ ಬಾಂಡ್‌ಗಳ ಮೂಲಕ ಬರುವ ಆದಾಯ ತೀವ್ರ ಕಡಿಮೆಯಾಗಿರುವುದರಿಂದ, 2021ರ ಹಣಕಾಸು ವರ್ಷದಲ್ಲಿ ಬಿಜೆಪಿಯ ಆದಾಯ ಶೇ.80ರಷ್ಟು ಇಳಿಕೆಯಾಗಿದೆ.

ಚುನಾವಣಾ ಆಯೋಗಕ್ಕೆ ಬಿಜೆಪಿ ಮೇ 21ರಂದು ತನ್ನ 2020-21ರ ಸಾಲಿನ ಲೆಕ್ಕ ಪರಿಶೋಧನಾ ವರದಿ ಸಲ್ಲಿಸಿದೆ. ಅದರ ಪ್ರಕಾರ ಬಿಜೆಪಿ ತನ್ನ ಆದಾಯ 752.33 ಕೋಟಿ ರೂ. ಹಾಗೂ ವೆಚ್ಚ 620.39 ಕೋಟಿ ರೂ. ಎಂದು ತೋರಿಸಿದೆ.

ಹಿಂದಿನ ಹಣಕಾಸು ವರ್ಷದಲ್ಲಿ ಬಿಜೆಪಿ ಆದಾಯ 3,623.28 ಕೋಟಿ ರೂ. ಆಗಿದ್ದರೆ, ವೆಚ್ಚ 1,651 ಕೋಟಿ ರೂ. ಆಗಿತ್ತು. ಚುನಾವಣಾ ಬಾಂಡ್ ಮೂಲಕ ಬರುವ ಆದಾಯ 2,555 (4ನೇ ಪುಟಕ್ಕೆ)

## ನಗರದಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗೆ ಸ್ಥಳ ಪರಿಶೀಲನೆ



ದಾವಣಗೆರೆ, ಜೂ.3- ನಗರದಲ್ಲಿ ನಿರ್ಮಿಸಲು ಉದ್ದೇಶಿಸಿರುವ ವಿಮಾನ ನಿಲ್ದಾಣಕ್ಕೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರ ನೇತೃತ್ವದಲ್ಲಿ ಪ್ರಾಧಿಕಾರದ ಅಧಿಕಾರಿಗಳು ಇಂದು ಸಂಜೆ ಸ್ಥಳ ಪರಿಶೀಲನೆ ನಡೆಸಿದರು.

ದಾವಣಗೆರೆ ತಾಲ್ಲೂಕಿನ ಹಾಲುವರ್ತಿ, ಆನಗೋಡು ಮತ್ತು ಉಳುಪಿನ ಕಟ್ಟೆ ಗ್ರಾಮಗಳ ಸುತ್ತಲಿನ 359 ಎಕರೆ ಪ್ರದೇಶವನ್ನು ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದರು. ಸುಮಾರು 52 ಸರ್ವೆ ನಂಬರ್‌ಗಳ (3ನೇ ಪುಟಕ್ಕೆ)

## ಭವಿಷ್ಯ ನಿಧಿಗೆ ಶೇ.8.1ರ ಬಡ್ಡಿ ನಿಗದಿ

ನವದೆಹಲಿ, ಜೂ. 3- 2021-22ರ ಸಾಲಿನಲ್ಲಿ ಭವಿಷ್ಯನಿಧಿ ಚಂದಾದಾರರಿಗೆ ಶೇ.8.1ರ ಬಡ್ಡಿ ನೀಡಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. 2020-21ರಲ್ಲಿ ಭವಿಷ್ಯ ನಿಧಿಗೆ ಶೇ.8.5ರ ಬಡ್ಡಿ ದರ ನೀಡಲಾಗಿತ್ತು. ಇದನ್ನು ಶೇ.8.1ಕ್ಕೆ ಇಳಿಸಲು ಇ.ಪಿ.ಎಫ್.ಓ. ಈ ವರ್ಷದ ಮಾರ್ಚ್ ತಿಂಗಳಲ್ಲಿ ನಿರ್ಧರಿಸಿತ್ತು. ನಂತರ ಕಾರ್ಮಿಕ ಇಲಾಖೆ ಈ ಪ್ರಸ್ತಾಪವನ್ನು ಹಣಕಾಸು ಸಚಿವಾಲಯಕ್ಕೆ ರವಾನಿಸಿತ್ತು. ಈ ಹಿಂದೆ 1977-78ರಲ್ಲಿ ಶೇ.8ರ ಬಡ್ಡಿ ದರ ನೀಡಲಾಗಿತ್ತು. ಆನಂತರದಲ್ಲಿ ಇದೇ ಮೊದಲ ಬಾರಿಗೆ ಕಡಿಮೆ ಬಡ್ಡಿ ದರ ನಿಗದಿ ಪಡಿಸಲಾಗಿದೆ.


**WANTED TEACHER**

Application Invited for the Post of
**Pre-School Teacher (Female)**
Qualification: Any Degree (Maths/Science/Engg) or MBA Candidate
must be Good in Communication
and Fluent in English.
**M: 99641 10736**


## ಶೇ.71ರಷ್ಟು ಜನರಿಗೆ ಆರೋಗ್ಯಕರ ಆಹಾರ ಖರೀದಿ ಸಾಮರ್ಥ್ಯವಿಲ್ಲ

ನವದೆಹಲಿ, ಜೂ. 3 – ದೇಶದ ಶೇ.71ರಷ್ಟು ಜನರಿಗೆ ಆರೋಗ್ಯಕರ ಆಹಾರ ಪಡೆಯುವ ಸಾಮರ್ಥ್ಯ ಇಲ್ಲ. ಪ್ರತಿ ವರ್ಷ ಕಳಪೆ ಆಹಾರ ಪದ್ಧತಿ ಕಾರಣದಿಂದ 17 ಲಕ್ಷ ಜನ ಸಾವನ್ನಪ್ಪುತ್ತಿದ್ದಾರೆ ಎಂದು ಸೆಂಟರ್ ಫಾರ್ ಸೈನ್ಸ್ ಅಂಡ್ ಎನ್ವಿರಾನ್‌ಮೆಂಟ್ (ಸಿ.ಎಸ್.ಇ.) ಮತ್ತು 'ಡೌನ್ ಟು ಅರ್ತ್' ನಿಯತಕಾಲಿಕ ರೂಪಿಸಿರುವ ವರದಿ ತಿಳಿಸಿದೆ.

ಆಹಾರ ಪದ್ಧತಿ ಸಮರ್ಪಕವಾಗಿರದ ಕಾರಣ ಜನರಲ್ಲಿ ಉಸಿರಾಟದ ಸಮಸ್ಯೆ, ಸಕ್ಕರೆ ಕಾಯಿಲೆ, ಕ್ಯಾನ್ಸರ್, ಪಾರ್ಶ್ವವಾಯು ಹಾಗೂ ಹೃದಯ ಸಂಬಂಧಿ ರೋಗಗಳು ಹೆಚ್ಚಾಗುತ್ತಿವೆ ಎಂದು 'ಸ್ಟೇಟ್ ಆಫ್ ಇಂಡಿಯಾಸ್ ಎನ್ವಿರಾನ್‌ಮೆಂಟ್ 2022 : ಇನ್ ಫಿಗರ್ಸ್' ವರದಿ ತಿಳಿಸಿದೆ.

ಜನರ ಆಹಾರದಲ್ಲಿ ಹಣ್ಣು, ತರಕಾರಿ ಹಾಗೂ ಕಾಳು ಕಡಿಮೆ ಇದೆ ಎಂದು ವರದಿ ತಿಳಿಸಿದೆ. ಸಂಸ್ಕರಿತ (2ನೇ ಪುಟಕ್ಕೆ)

## ಕುಶಲ ಶ್ರಮಿಕ, ದಕ್ಷ ಉತ್ಪಾದನೆಯಿಂದ ಜವಳಿ ಏಳಿಗೆ

### ಬಿ.ಐ.ಇ.ಟಿ.ಯ ಟೆಕ್ಸ್‌ಕ್ರಿಯೇಟಿವ್ - 22 ಉದ್ಘಾಟನಾ ಕಾರ್ಯಕ್ರಮದಲ್ಲಿ ಡಾ. ಸೆಲ್ವದಾಸ್

ದಾವಣಗೆರೆ, ಮೇ 3 - ಜವಳಿ ವಲಯದಲ್ಲಿ ದೇಶ ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆ ಎದುರಿಸುತ್ತಿದೆ. ಬಾಂಗ್ಲಾದೇಶದಂತಹ ದೇಶಗಳು ಕಡಿಮೆ ಕೂಲಿ ಹಾಗೂ ಉತ್ತಮ ತಂತ್ರಜ್ಞಾನ ಅಳವಡಿಕೆಯಿಂದ ಮುಂಚೂಣಿಗೆ ಬರುತ್ತಿವೆ. ಈ ಸಂದರ್ಭದಲ್ಲಿ ಭಾರತದ ಜವಳಿ ವಲಯ ಸಹ ಸ್ಪರ್ಧೆಗೆ ಸನ್ನದ್ಧವಾಗಬೇಕಿದೆ ಎಂದು ಬೆಂಗಳೂರಿನ ಜಿ.ಸಿ. ವಿಶ್ವವಿದ್ಯಾನಿಲಯದ ಸಹಾಯಕ ಉಪನ್ಯಾಸಕ ಡಾ. ಸೆಲ್ವದಾಸ್ ಹೇಳಿದ್ದಾರೆ.

ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಜವಳಿ ವಿಭಾಗದ ವತಿಯಿಂದ ಇಂದು ಬೆಳಿಗ್ಗೆ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಎರಡು ದಿನಗಳ 'ಟೆಕ್ಸ್‌ಕ್ರಿಯೇಟಿವ್ - 22' ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ



ಅವರು ಮಾತನಾಡುತ್ತಿದ್ದರು.

ಕಡಿಮೆ ವೆಚ್ಚದಲ್ಲಿ ಬಟ್ಟೆಗಳನ್ನು ಉತ್ಪಾದಿಸಲು ಜಾಗತಿಕ ಕಂಪನಿಗಳು ನಿರಂತರ ಹುಡುಕಾಟದಲ್ಲಿರುತ್ತವೆ. ವಿಯಟ್ನಾಂ, ಬಾಂಗ್ಲಾದೇಶ ಮುಂತಾದ ದೇಶಗಳ ಕಡೆ ಗಮನ ಹೆಚ್ಚಾಗಿದೆ. ಬಾಂಗ್ಲಾದೇಶದಲ್ಲಿ ಕೂಲಿ ಕಡಿಮೆಯಾಗಿರುವ ಜೊತೆಗೆ ಕಚ್ಚಾ ವಸ್ತುಗಳ ಲಭ್ಯತೆ ಇದೆ. ಇತ್ತೀಚಿನ ದಿನಗಳಲ್ಲಿ ಕುಶಲ ಕಾರ್ಮಿಕರು ಲಭ್ಯವಾಗಿ, ಉತ್ಪಾದನಾ ತಂತ್ರಜ್ಞಾನದಲ್ಲೂ ಸುಧಾರಣೆಯಾಗಿದೆ ಎಂದವರು ಹೇಳಿದರು.

ದೇಶದ ಜವಳಿ ಉದ್ಯಮಗಳು ಈಗಾಗಲೇ ತಾಂತ್ರಿಕ ವಿಷಯದಲ್ಲಿ ಸುಧಾರಣೆ ಕಂಡಿವೆ. ಕಡಿಮೆ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ಬಟ್ಟೆಗಳನ್ನು ಉತ್ಪಾದಿಸುವಲ್ಲಿ ಮುನ್ನಡೆದಿವೆ. ಇದರ ಜೊತೆಗೆ ಕುಶಲ ಕಾರ್ಮಿಕ ಶಕ್ತಿಯನ್ನು ಹೊಂದಬೇಕಿದೆ. ಆಗ ಮಾತ್ರ ಜಾಗತಿಕ ಸ್ಪರ್ಧೆಗೆ ಬಲ ಬರುತ್ತದೆ ಎಂದವರು ತಿಳಿಸಿದರು.

ಕೊರೊನಾ ಸಮಯದಲ್ಲಿ ಕಾರ್ಮಿಕರು ವಲಸೆ ಹೋದ ಕಾರಣ ಸಾಕಷ್ಟು ಸಮಸ್ಯೆ ಉಂಟಾಗಿತ್ತು. ನಂತರದ ದಿನಗಳಲ್ಲಿ ಉದ್ಯಮ ಚೇತರಿಸಿಕೊಂಡು ಅಗತ್ಯ ತಂತ್ರಜ್ಞಾನಗಳ ಅಳವಡಿಕೆಯೊಂದಿಗೆ ಮುನ್ನಡೆದಿದೆ. ಈ ನಡುವೆಯೇ, ಕಚ್ಚಾ ವಸ್ತುಗಳ ಬೆಲೆ ಏರಿಕೆ ಸಮಸ್ಯೆ ಎದುರಾಗಿದೆ. ಲೀನಿಯರ್ ಮಷೀನ್ ಸಿಸ್ಟಂ ಮೂಲಕ ಉತ್ಪಾದನೆ ವೇಳೆ ಆಗುವ ಪೋಲು ಕಡಿಮೆ ಮಾಡುವ ಅಗತ್ಯವಿದೆ ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಜವಳಿ ಉದ್ಯಮದಲ್ಲಿ ಬ್ರಾಂಡಿಂಗ್ ಬಹಳ (4ನೇ ಪುಟಕ್ಕೆ)

## ಹರಿಹರ: ಮುಂಗಾರು ಮುಂಜಾಗ್ರತೆಗೆ ಸೂಚನೆ

### ಸ್ಥಳಾಂತರ ಸಾಧ್ಯತೆ, ಕಾಳಜಿ ಕೇಂದ್ರಗಳಿಂದ ಹಿಡಿದು ರಕ್ಷಣಾ ಕಾರ್ಯದವರೆಗೆ ಸನ್ನದ್ಧತೆಗೆ ಕ್ರಮ



### ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ತಹಶೀಲ್ದಾರ್

ಹರಿಹರ, ಜೂ. 3- ಮುಂಗಾರು ಮಳೆ ಹೆಚ್ಚಾಗಿ ತಾಲ್ಲೂಕಿನಲ್ಲಿ ತುರ್ತು ಪರಿಸ್ಥಿತಿ ನಿರ್ಮಾಣವಾದಂತಹ ಸಂದರ್ಭದಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳು ಮುಂಜಾಗ್ರತಾ ಕ್ರಮಗಳಿಗೆ ಸಿದ್ದತೆ ಮಾಡಿಕೊಂಡಿರಬೇಕು ಎಂದು ತಹಶೀಲ್ದಾರ್ ಎಂ.ಬಿ. ಅಶ್ವತ್ಥ್ ಹೇಳಿದರು.

ನಗರದ ತಾಲ್ಲೂಕು ಕಚೇರಿಯ ಸಭಾಂಗಣದಲ್ಲಿ ವಿಪತ್ತು ನಿರ್ವಹಣೆ ಬಗ್ಗೆ ವಿವಿಧ ಇಲಾಖೆಯ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ಈಗಾಗಲೇ ವಾಡಿಕೆಯ ಶೇ. 203 ರಷ್ಟು ನಿರೀಕ್ಷೆಗೂ ಮೀರಿದ ಮಳೆಯಾಗಿದೆ. ಮುಂಗಾರು ಮಳೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬೀಳುವ ನಿರೀಕ್ಷೆ ಮಾಡಲಾಗಿದೆ. ತಾಲ್ಲೂಕಿನ 9 ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ನದಿ ನೀರು ಹರಿಯುವುದರಿಂದ ಮತ್ತು ನಗರದ ಬೆಂಕಿನಗರ, ಕಾಳಿದಾಸ ನಗರ, ಗಂಗಾನಗರ ಸೇರಿದಂತೆ ಇತರೆ ಭಾಗದಲ್ಲಿ ಮಳೆ ಪ್ರವಾಹ ಹೆಚ್ಚಾದ ಸಮಯದಲ್ಲಿ ಎಷ್ಟೋ ಕುಟುಂಬಗಳಿಗೆ ಹಾಗೂ ಜಾನುವಾರುಗಳಿಗೆ ತೊಂದರೆಗಳಾಗಿ ಸ್ಥಳಾಂತರ ಮಾಡಬೇಕಾಗುತ್ತದೆ ಎಂಬುದರ ಬಗ್ಗೆ ಮೊದಲೇ ವರದಿಯನ್ನು ಸಿದ್ಧಪಡಿಸಿಕೊಂಡಿರಬೇಕು ಎಂದು ತಿಳಿಸಿದರು.

ಆಯಾ ಭಾಗದಲ್ಲಿ ಕಾಳಜಿ ಕೇಂದ್ರವನ್ನು ತೆರೆಯಬೇಕು. ಮಳೆ ಹೆಚ್ಚಾದಾಗ ಜಾನುವಾರುಗಳ ಸ್ಥಳಾಂತರ ಅಗತ್ಯವಾಗುವ ಬಗ್ಗೆ ಪಶುಪಾಲನೆ ಇಲಾಖೆ ತಾಲ್ಲೂಕಿನಲ್ಲಿ ಸಮೀಕ್ಷೆ ಮಾಡಬೇಕು. ಅಗತ್ಯವಿರುವ ಕಡೆ ಶಾಲೆ ಆವರಣದಲ್ಲಿ ಕಾಳಜಿ ಕೇಂದ್ರ ತೆರೆಯಲು ಸಿದ್ಧತೆ ಮಾಡಿಕೊಡಬೇಕು ಎಂದು ಅಶ್ವತ್ಥ್ ಹೇಳಿದರು.

ರೈತರಿಗೆ ಯಾವುದೇ ರೀತಿಯ ಕೀಟನಾಶಕ, ಗೊಬ್ಬರ ಹಾಗೂ ಬೀಜಗಳ ಕೊರತೆ ಬರದಂತೆ ಎಚ್ಚರ ವಹಿಸಬೇಕು. ವಿದ್ಯುತ್ ಕಂಬಗಳ ಬಗ್ಗೆ ಬೆಸ್ಕಾಂ ಇಲಾಖೆಯವರು ಎಚ್ಚರಿಕೆ ವಹಿಸಬೇಕು. ಅಗ್ನಿ ಶಾಮಕ ದಳದವರು ಬೋಟ್, ಜೀವ ರಕ್ಷಣಾ ಕವಚಗಳನ್ನು ಸಿದ್ಧತೆ ಮಾಡಿಕೊಂಡಿರಬೇಕು. ನೀರಾವರಿ ಇಲಾಖೆಯ ಅಧಿಕಾರಿಗಳು ತಾಲ್ಲೂಕಿನಲ್ಲಿ ಇರುವ ಕಾಲುವೆಗಳಲ್ಲಿ ನೀರು ನಿಲ್ಲದಂತೆ ಸರಾಗವಾಗಿ ಹರಿಯುವಂತೆ ನೋಡಿಕೊಳ್ಳಬೇಕು ಎಂದವರು ತಿಳಿಸಿದರು.

ನಗರದ ಚರಂಡಿಗಳಲ್ಲಿ ನೀರು ಸರಾಗವಾಗಿ ಹರಿಯುವಂತೆ ಮಾಡಬೇಕು. ಲೋಕೋಪಯೋಗಿ ಇಲಾಖೆ ಆದಷ್ಟು ಬೇಗ ರಸ್ತೆ ದುರಸ್ತಿ ಪಡಿಸಬೇಕು ಎಂದು ಅಶ್ವತ್ಥ್ ತಿಳಿಸಿದರು. ಗ್ರಾಮ ಪಂಚಾಯತಿ ಪಿ.ಡಿ.ಓ.ಗಳು ತಮ್ಮ ಕಾರ್ಯ ಕ್ಷೇತ್ರದಲ್ಲಿ ಇದ್ದು ಜನರ ಕಷ್ಟಗಳಿಗೆ ಸರಿಯಾಗಿ ಸ್ಪಂದಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾ.ಪಂ. ಇ.ಓ. ಗಂಗಾಧರನ್, ಪೌರಾಯುಕ್ತ ಐಗೂರು ಬಸವರಾಜ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ನಾರನಗೌಡ, ಆರೋಗ್ಯ ಇಲಾಖೆಯ ಡಾ. ಚಂದ್ರಮೋಹನ್, ಲೋಕೋಪಯೋಗಿ ಇಲಾಖೆ ಸಹಾಯಕ ಇಂಜಿನಿಯರ್ ಶಿವಮೂರ್ತಪ್ಪ, ಪಶು ಸಂಗೋಪನೆ ಇಲಾಖೆ ಸಿದ್ದೇಶ್ ಟಿ.ಪಿ. ನಗರಸಭೆ ಗುರುಪ್ರಸಾದ್, ಅಬ್ದುಲ್ ಹಮೀದ್, ತೋಟಗಾರಿಕೆ ಸಹಾಯಕ ಅಧಿಕಾರಿ ಜೆ. ರೇಖಾ, ಅಬಕಾರಿ ಇಲಾಖೆಯ ಶಿಲ್ಪಾ, ಬೆಸ್ಕಾಂ ಇಲಾಖೆ ಸಹಾಯಕ ಇಂಜಿನಿಯರ್ ಲಕ್ಶ್ಮಪ್ಪ , ಸಮಾಜ ಕಲ್ಯಾಣ ಇಲಾಖೆ ಸಿಬ್ಬಂದಿ ಮಂಜುನಾಥ್, ತಾಲ್ಲೂಕು ಆಡಳಿತದ ಸಿಬ್ಬಂದಿ ಮಂಜುನಾಥ್ ಹಾಗೂ ಇತರರು ಹಾಜರಿದ್ದರು.


ಸ್ಥಾಪನೆ : 2-3-2009, ರಿ. ನಂ. ಎ.ಆರ್.31/ಆರ್.ಜಿ.ಎನ್./29261/2008-09
ಆದೇಶ ಸಂಖ್ಯೆ : ಸಿ.ಆರ್./ಡಿವಿಜಿ/ಆರ್.ಎಸ್.ಆರ್/ಎ.ಎಂ.ಡಿ/19/15-16

**ಕನಕ ವಿವಿದೋದ್ದೇಶ ಸಹಕಾರ ಸಂಘ ನಿ.,(ರಿ)**

ಮುಖ್ಯ ಕಛೇರಿ : ಹದಡಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ. ಫೋನ್ : 08192-218555
ಉಪಶಾಖೆ : 1ನೇ ಉಪಘಟಕ-ತ್ಯಾವಣಿಗೆ. 2ನೇ ಉಪಘಟಕ-ದಾವಣಗೆರೆ.

**ಶ್ರೀ ರಮೇಶ್ ಪಿಸಾಳೆ ನಿರ್ದೇಶಕರಾಗಿ ಅವಿರೋಧ ಆಯ್ಕೆ**





ದಿನಾಂಕ : 02-06-2022ರಂದು ನಡೆದ ಸಭೆಯಲ್ಲಿ
ನಮ್ಮ ಸಹಕಾರ ಸಂಘದ ನೂತನ ನಿರ್ದೇಶಕರಾಗಿ
**ಶ್ರೀ ರಮೇಶ್ ಪಿಸಾಳೆ**
ಅವರು ಅವಿರೋಧವಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ
ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎ.ಹೆಚ್. ನಾಗರಾಜ್,
ಆಡಳಿತ ಮಂಡಳಿ ನಿರ್ದೇಶಕರು, ಸಿಬ್ಬಂದಿ ವರ್ಗದವರು, ಸಂಘದ ಸದಸ್ಯರು ಉಪಸ್ಥಿತರಿದ್ದರು.

# ಹರಪನಹಳ್ಳಿಯಲ್ಲಿ ಎಸ್‌ಎಫ್‌ಐ, ಎನ್‌ಎಸ್‌ಯುಐ ಪ್ರತಿಭಟನೆ

ಹರಪನಹಳ್ಳಿ, ಜೂ.3- ಕಾನೂನು ಉಲ್ಲಂಘಿಸಿ ಮನಸೋ ಇಚ್ಛೆಯಾಗಿ ಖಾಸಗಿ ಕಾಲೇಜುಗಳಲ್ಲಿ ಶುಲ್ಕ ಪಡೆಯಲಾಗುತ್ತಿದೆ ಎಂದು ಆರೋಪಿಸಿ ಎಸ್‌ಎಫ್‌ಐ ಹಾಗೂ ಎನ್‌ಎಸ್‌ಯುಐ ಕಾರ್ಯಕರ್ತರು ಎಡಿಬಿ ಕಾಲೇಜು ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು.




ಪ್ರತಿಭಟನಕಾರರು ತಾಲ್ಲೂಕು ಮಿನಿ ವಿಧಾನಸೌಧಕ್ಕೆ ತೆರಳಿದಾಗ, ಸ್ಥಳದಲ್ಲಿ ತಹಶೀಲ್ದಾರ್ ಇಲ್ಲದ ಕಾರಣ ನೇರವಾಗಿ ಎಡಿಬಿ, ಎಸ್‌ಎಸ್‌ಎಚ್ ಜೈನ್ ಪಿಯು ಕಾಲೇಜಿನ ಪ್ರಾಚಾರ್ಯರೊಂದಿಗೆ ಹೆಚ್ಚಿನ ಶುಲ್ಕ ಪಡೆಯುವಂತಿಲ್ಲ ಎಂದು ವಾಗ್ವಾದ ನಡೆಸಿದರು, ಹೊರಗಡೆ ಬಂದು ಡೊನೇಷನ್ ವಿರುದ್ಧ ಘೋಷಣೆ ಕೂಗಿದರು.

ಎಸ್‌ಎಫ್‌ಐ ತಾಲ್ಲೂಕು ಅಧ್ಯಕ್ಷ ವೆಂಕಟೇಶ್ ಮಾತನಾಡಿ, ಖಾಸಗಿ ಶಿಕ್ಷಣ ಸಂಸ್ಥೆಗಳು ವ್ಯಾಪಕವಾಗಿ ಡೊನೇಷನ್ ಪಡೆಯುತ್ತಿವೆ. ಡೊನೇಷನ್ ವಿರುದ್ಧ ಬಿಇಓ ರವರು ಯಾವುದೇ ರೀತಿ ಕ್ರಮಕೈಗೊಳ್ಳುತ್ತಿಲ್ಲ. ಇದೇ ರೀತಿಯಾಗಿ ಕಾಲೇಜುಗಳಲ್ಲಿ ಶುಲ್ಕವನ್ನು ಪಡೆಯಲಾಗುತ್ತಿದ್ದು, ಕೂಡಲೇ ಸರ್ಕಾರ ನಿಗದಿಪಡಿಸಿದ ಶುಲ್ಕವನ್ನು ಮಾತ್ರ ಪಡೆಯಬೇಕು ಎಂದು ಆಗ್ರಹಿಸಿದರು.

ತಹಶೀಲ್ದಾರ್ ನೇತೃತ್ವದಲ್ಲಿ ಕಾಲೇಜು ಆಡಳಿತ ಮಂಡಳಿ, ಪೋಷಕರು, ವಿದ್ಯಾರ್ಥಿ ಸಂಘಟನೆಯ ಸಮಿತಿ ರಚಿಸಿ ಆ ಮೂಲಕ ಶುಲ್ಕ ನಿಗದಿ ಮಾಡಿ ಶಾಲಾ-ಕಾಲೇಜುಗಳಲ್ಲಿ ದಾಖಲಾತಿ ಮಾಡಿಕೊಳ್ಳಬೇಕು. ಒಂದು ವೇಳೆ ಸಮಿತಿ ಇಲ್ಲದೆ, ಮನಸೋ ಇಚ್ಛೆ ಶುಲ್ಕ ಪಡೆದಲ್ಲಿ ಮುಂದಿನ ದಿನಗಳಲ್ಲಿ ತೀವ್ರವಾದ ಪ್ರತಿಭಟನೆ ಮಾಡುವುದಾಗಿ ಎಚ್ಚರಿಸಿದರು.

ಎನ್‌ಎಸ್‌ಯುಐ ಜಿಲ್ಲಾ ಉಪಾಧ್ಯಕ್ಷ ಎಂ.ಡಿ.ಶ್ರೀಕಾಂತ್ ಮಾತನಾಡಿ, ಪಟ್ಟಣದಲ್ಲಿರುವ ಭಂಗಿ ಬಸಪ್ಪ ವಿಜ್ಞಾನ ಪಿಯು ಕಾಲೇಜು, ಎಸ್‌ಎಸ್‌ಎಚ್ ಜೈನ್ ಪಿಯು ಕಾಲೇಜು ಸೇರಿದಂತೆ ಇತರೆ ಕಾಲೇಜು ಆಡಳಿತ ಮಂಡಳಿ ತಮ್ಮದೇ ಆದ ಶುಲ್ಕ ನಿಗದಿ ಮಾಡಿಕೊಂಡು ದಾಖಲಾತಿ ಮಾಡಿಕೊಳ್ಳುತ್ತಿದ್ದಾರೆ. ತಾಲ್ಲೂಕು ಹಿಂದುಳಿದಿದ್ದು, ಅತ್ಯಂತ ಬಡವರು, ರೈತ ಕೂಲಿ ಕಾರ್ಮಿಕರು ಇದ್ದು, ಶಿಕ್ಷಣ ಕೊಡಿಸಲು ಸರಿಯಾದ ಉದ್ಯೋಗವಿಲ್ಲದೆ ಆರ್ಥಿಕವಾಗಿ ಹಿಂದುಳಿದಿದ್ದು, ಇಂತಹ ಮಕ್ಕಳು ಶಿಕ್ಷಣ ವಂಚಿತರಾಗುತ್ತಿದ್ದಾರೆ. ಕೂಡಲೇ ಡೊನೇಷನ್ ಕೈಬಿಟ್ಟು ಸರ್ಕಾರದ ಶುಲ್ಕ ಮಾತ್ರ ಪಡೆಯುವಂತೆ ಒತ್ತಾಯಿಸಿದರು.

ನಂತರ ಸ್ಥಳಕ್ಕೆ ಪೊಲೀಸರು ಆಗಮಿಸಿ, ವಿದ್ಯಾರ್ಥಿಗಳಿಗೆ ಹಾಗೂ ಆಡಳಿತ ಮಂಡಳಿಗೆ ತಿಳಿ ಹೇಳಿ ಸರ್ಕಾರದ ನಿಯಮವನ್ನು ಪಾಲಿಸುವಂತೆ ಸೂಚಿಸಿದ ನಂತರ ಪ್ರತಿಭಟನೆಯಿಂದ ವಿದ್ಯಾರ್ಥಿಗಳು ಹಿಂದೆ ಸರಿದರು.

ಎನ್‌ಎಸ್‌ಯುಐ ತಾಲ್ಲೂಕು ಅಧ್ಯಕ್ಷ ಹರೀಶ್‌ನಾಯ್ಕ, ಅಪ್ಪು, ವಾಸೀಂ, ಬಾಲಾಜಿ, ಪ್ರಕಾಶ್, ಶಿವು, ಸಂಜು, ಅಭಿನಾಯ್ಕ, ಲಕ್ಯಾನಾಯ್ಕ, ಪ್ರಸನ್ನ, ರವಿನಾಯ್ಕ, ಭರತ, ಬಸವರಾಜ, ಹೇಮಂತ ಸೇರಿದಂತೆ ಪೋಷಕರು ಇದ್ದರು.

## ಮಲೇಬೆನ್ನೂರು ರಾಜ ರಾಜೇಶ್ವರಿ ವಿದ್ಯಾರ್ಥಿಗಳಿಗೆ ವ್ಯಾಕ್ಸಿನ್



ಮಲೇಬೆನ್ನೂರು, ಜೂ.3- ಮಲೇಬೆನ್ನೂರು ಪಟ್ಟಣದ ಜಿಗಳಿ ರಸ್ತೆಯಲ್ಲಿರುವ ಒಡೆಯರ್ ಬಸಾಪುರ ಗ್ರಾಪಂ ವ್ಯಾಪ್ತಿಯ ರಾಜ ರಾಜೇಶ್ವರಿ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಹಿನ್ನೆಲೆಯಲ್ಲಿ ವ್ಯಾಕ್ಸಿನ್ ಹಾಕಲಾಯಿತು.

ಸ್ಥಳೀಯ ಆರೋಗ್ಯ ಕೇಂದ್ರದ ಶುಶ್ರೂಷಕಿ ಶ್ರೀಮತಿ ವಿಮಲಾ ಶೀಲಾ ಶಾಲೆಯ 7,8,9 ಮತ್ತು 10 ನೇ ತರಗತಿ ವಿದ್ಯಾರ್ಥಿಗಳಿಗೆ 1 ನೇ ಡೋಸ್ ಪಡೆದವರಿಗೆ 2 ನೇ ಹಾಗೂ ಈವರೆಗೂ ಪಡೆಯದಿದ್ದವರಿಗೆ 1 ನೇ ಡೋಸ್ ವ್ಯಾಕ್ಸಿನ್ ನೀಡಿದರು. ಆಶಾ ಕಾರ್ಯಕರ್ತರಾದ ಶ್ರೀಮತಿ ಆಶಾ ಮತ್ತು ಶ್ರೀಮತಿ ಜ್ಯೋತಿ ಸಹಕರಿಸಿದರು. ಸಂಸ್ಥೆಯ ಕಾರ್ಯದರ್ಶಿ ಜಿ.ಬಿ. ಶಿವಾನಂದಪ್ಪ, ಪ್ರಾಂಶುಪಾಲರಾದ ಶ್ರೀಮತಿ ಸುಜಾತ ಶಿವಾನಂದಪ್ಪ, ಮುಖ್ಯೋಪಾಧ್ಯಾಯ ಶಶಿಧರ್ ಎಸ್.ಹಾಗೂ ಶಿಕ್ಷಕರು ಹಾಜರಿದ್ದರು.

## ಟರ್ಕಿ ಹಣದುಬ್ಬರ ಶೇ.73.5ಕ್ಕೆ ಏರಿಕೆ

ಅಂಕಾರಾ (ಟರ್ಕಿ), ಜೂ. 3 – ಮೇ ತಿಂಗಳಲ್ಲಿ ಟರ್ಕಿಯ ಹಣದುಬ್ಬರ ದರ ಶೇ.73.5ರ ಹಂತಕ್ಕೆ ಏರಿಕೆಯಾಗಿದೆ. 1998ರ ನಂತರ ಇದೇ ಮೊದಲ ಬಾರಿಗೆ ಹಣದುಬ್ಬರ ದರ ಈ ಮಟ್ಟಕ್ಕೆ ಬಂದಿದೆ.

ಟರ್ಕಿಯ ಅಂಕಿ-ಅಂಶಗಳ ಸಂಸ್ಥೆಯ ಮಾಹಿತಿಯ ಪ್ರಕಾರ, ಏಪ್ರಿಲ್ ತಿಂಗಳಲ್ಲಿ ಹಣದುಬ್ಬರ ಶೇ.70ರಷ್ಟಿತ್ತು. ತಿಂಗಳಲ್ಲಿ ಹಣದುಬ್ಬರ ಶೇ.3ರಷ್ಟು ಹೆಚ್ಚಾಗಿದೆ.

ಹಲವಾರು ದೇಶಗಳು ಹಣದುಬ್ಬರದ ಸಮಸ್ಯೆ ಎದುರಿಸುತ್ತಿವೆ. ಆದರೆ, ಟರ್ಕಿ ಅಧ್ಯಕ್ಷ ರೆಸೆಪ್ ತಯಿಪ್ ಎರ್ಡಗನ್ ಅವರ ಆರ್ಥಿಕ ನೀತಿಗಳ ಕಾರಣದಿಂದ ಹಣದುಬ್ಬರ ದಾಖಲೆ ಮಟ್ಟಕ್ಕೆ ತಲುಪಿದೆ ಎಂದು ವಿಶ್ಲೇಷಕರು ತಿಳಿಸಿದ್ದಾರೆ. ಬಡ್ಡಿ ದರ ಹೆಚ್ಚಿಸಿದರೆ ಹಣದುಬ್ಬರ ಉಂಟಾಗುತ್ತದೆ ಎಂದು ಎರ್ಡಗನ್ ನಿಲುವು ತಳೆದಿದ್ದಾರೆ. ಇದರಿಂದಾಗಿ ಹಣದುಬ್ಬರ ಹೆಚ್ಚಾಗಿದ್ದರೂ ಬಡ್ಡಿ ದರವನ್ನು ಅವರು ಹೆಚ್ಚಿಸುತ್ತಿಲ್ಲ. ಸಾಂಪ್ರದಾಯಿಕ ಆರ್ಥಿಕ ನೀತಿ ಹೊರತಾದ ದಾರಿ ಹಿಡಿದಿರುವ ಟರ್ಕಿ ಅಧ್ಯಕ್ಷ, ತಮ್ಮ ನೀತಿ ಬದಲಿಸುವ ಸೂಚನೆ ತೋರುತ್ತಿಲ್ಲ.

ಟರ್ಕಿಯ ಕೇಂದ್ರ ಬ್ಯಾಂಕ್ ಕಳೆದ ಸೆಪ್ಟೆಂಬರ್‌ನಲ್ಲಿ ಬಡ್ಡಿ ದರಗಳನ್ನು ಐದು ಮೂಲ ಅಂಕಗಳಷ್ಟು ಇಳಿಕೆ ಮಾಡಿತ್ತು. ಪ್ರಸಕ್ತ ಬಡ್ಡಿ ದರ ಶೇ.14ರಷ್ಟಿದೆ. ಕಳೆದ ವರ್ಷದಿಂದ ಟರ್ಕಿ ಹಣವಾದ ಲಿರಾ ಮೌಲ್ಯ ಡಾಲರ್ ಎದುರು ಶೇ.44ರಷ್ಟು ಕುಸಿದಿದೆ. ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸಿದ ನಂತರ ಅನಿಲ, ತೈಲ ಹಾಗೂ ಆಹಾರ ಧಾನ್ಯಗಳ ಬೆಲೆ ಹೆಚ್ಚಾಗಿದೆ. ಇದು ಆಮದು ಅವಲಂಬಿತ ಟರ್ಕಿ ಸಮಸ್ಯೆಗಳನ್ನು ಮತ್ತಷ್ಟು ಹೆಚ್ಚಿಸಿದೆ.

## ಅಕ್ರಮ ಮರಳು ಸಂಗ್ರಹ : ದಾಳಿ



ರಾಣೇಬೆನ್ನೂರು, ಜೂ.3- ಮೆಡ್ಲೇರಿ ಮತ್ತು ಹಿರೇಬಿದರಿ ತುಂಗಭದ್ರಾ ನದಿ ಪಾತ್ರದಲ್ಲಿ ತಲಾ 21 ಮತ್ತು 14 ಟನ್ ಮರುಳನ್ನು ಅಕ್ರಮವಾಗಿ ಸಂಗ್ರಹ ಮಾಡಿದ್ದು, ಪಿಡಬ್ಲ್ಯೂಡಿ ಅಧಿಕಾರಿಗಳ ಜೊತೆ ಸೇರಿ ವಶಪಡಿಸಿಕೊಳ್ಳಲಾಗಿದೆ ಎಂದು ಇಲ್ಲಿನ ತಹಶೀಲ್ದಾರ್ ತಿಳಿಸಿದ್ದಾರೆ. ಯಾರಿಂದ ಜಪ್ತು ಮಾಡಲಾಗಿದೆ ಅಥವಾ ಸಂಗ್ರಹ ಮಾಡಿದವರು ಯಾರು ಎನ್ನುವ ವಿವರಣೆ ಇಲ್ಲದೆ, ನದಿಯಲ್ಲಿ ಮರಳು ಗುಡ್ಡೆ ಬಳಿ ನಿಂತು ತೆಗೆದ ಫೋಟೋ ಪತ್ರಿಕೆಗಳಿಗೆ ವಾಟ್ಸಾಪ್ ಮೂಲಕ ಕಳಿಸಲಾಗಿದೆ.

## ನಗರದಲ್ಲಿ ಇಂದು ಸಾಂಸ್ಕೃತಿಕ, ಕಲಾ ತಂಡದವರಿಗೆ ಪ್ರಶಸ್ತಿ ಪ್ರದಾನ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಜನ್ಮ ದಿನಾಚರಣೆ ಮತ್ತು 'ಕನ್ನಡ ನುಡಿ ಹಬ್ಬ'ದ ಸಾಂಸ್ಕೃತಿಕ, ಕಲಾ ತಂಡದವರಿಗೆ ಪ್ರಶಸ್ತಿ ಪ್ರದಾನ ಸಮಾರಂಭವು ಇಂದು 4.30 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ.


ಉದ್ಘಾಟನೆಯನ್ನು ಡಾ. ನಾ. ಲೋಕೇಶ್ ಒಡೆಯರ್ ನೆರವೇರಿಸುವರು. ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ 'ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ನಾಡಿಗೆ ಕೊಟ್ಟ ಕೊಡುಗೆಗಳು' ವಿಷಯ ಕುರಿತು ಡಾ. ಪಿ. ನಾಗಭೂಷಣಗೌಡ ಉಪನ್ಯಾಸ ನೀಡುವರು. ಮುಖ್ಯ ಅತಿಥಿಗಳಾಗಿ ಎ.ಆರ್. ಉಜ್ಜನಪ್ಪ ಆಗಮಿಸುವರು.

ಕಾರ್ಯಕ್ರಮದಲ್ಲಿ ಶ್ರೀಮತಿ ಎಸ್.ಎಂ. ಮಲ್ಲಮ್ಮ, ಶ್ರೀಮತಿ ಯಶಾ ದಿನೇಶ್, ಶ್ರೀಮತಿ ರೇಖಾ ಓಂಕಾರಪ್ಪ, ಶ್ರೀಮತಿ ರುದ್ರಾಕ್ಷಿಬಾಯಿ ಪುಟ್ಟಾನಾಯ್ಕ ಗೌರವ ಉಪಸ್ಥಿತರಿರುವರು.

## ಹೊನ್ನಾಳಿ: ಸಿಸಿ ಟಿವಿಯಲ್ಲಿ ಸೆರೆಯಾದ ಪೆಟ್ರೋಲ್ ಕಳ್ಳತನದ ದೃಶ್ಯ

ಹೊನ್ನಾಳಿ, ಜೂ.3- ಮನೆಗಳಿಗೆ ನುಗ್ಗಿ ನಗ-ನಾಣ್ಯ ಕದ್ದೊಯ್ಯುವುದು, ಮನೆಗಳ ಆವರಣದಲ್ಲಿ ನಿಲ್ಲಿಸಿದ್ದ ಬೈಕ್‌ಗಳನ್ನು ಕಳವು ಮಾಡುವುದು, ಒಂಟಿ ಮಹಿಳೆಯರ ಸರಗಳ್ಳತನ ಸೇರಿದಂತೆ ನಾನಾ ತರಹದ ದುಷ್ಕೃತ್ಯಗಳ ಬಳಿಕ ಇದೀಗ ದುರುಳರು ಮನೆಗಳ ಆವರಣದಲ್ಲಿ ನಿಲ್ಲಿಸಿದ್ದ ಬೈಕ್‌ಗಳಿಂದ ಪೆಟ್ರೋಲ್ ಕದಿಯುವ ಕೆಲಸಕ್ಕೆ ಮುಂದಾಗಿದ್ದಾರೆ.

ಹೊನ್ನಾಳಿ ಪಟ್ಟಣದ ದುರ್ಗಿಗುಡಿ ಬಡಾವಣೆ ಸೇರಿದಂತೆ ನಾನಾ ಕಡೆ ಪೆಟ್ರೋಲ್ ಕಳ್ಳತನದ ಕೃತ್ಯಗಳು ನಡೆದಿವೆ. ದುರ್ಗಿಗುಡಿ ಬಡಾವಣೆಯ 9ನೇ ಕ್ರಾಸ್‌ನ ನಿವಾಸಿ-ಮೊಬೈಲ್ ಅಂಗಡಿ ಮಾಲೀಕ ವೀರೇಶ್ ಮನೆಯ ಕಾರ್ ಶೆಡ್‌ನಲ್ಲಿ ನಿಲ್ಲಿಸಿದ್ದ ಬೈಕ್‌ನಿಂದ ಏಳೆಂಟು ಲೀಟರ್‌ಗಳಷ್ಟು ಪೆಟ್ರೋಲ್ ಕದ್ದೊಯ್ದಿದ್ದಾರೆ. ಪೆಟ್ರೋಲ್ ಕಳವು ದೃಶ್ಯ ಸಿಸಿ ಟಿವಿಯಲ್ಲಿ ಸೆರೆಯಾಗಿದೆ. ಮುಖಗಳು ಮಸುಕಾಗಿರುವುದರಿಂದ ಗುರುತು ಹಿಡಿಯಲು ಸಾಧ್ಯವಾಗಿಲ್ಲ. ಇದೇ ರೀತಿ ಇದೇ ಕ್ರಾಸ್‌ನಲ್ಲಿ ಸುಮಾರು 13 ಬೈಕ್‌ಗಳ ಪೆಟ್ರೋಲ್ ಕದ್ದೊಯ್ದಿದ್ದಾರೆ. ಕಳವು ಮಾಡುತ್ತಿದ್ದ ಸಂದರ್ಭದಲ್ಲಿ ಕೆಲ ಮನೆಗಳ ಮಾಲೀಕರು ಎಚ್ಚರಗೊಂಡು ಹೊರಗೆ ಬರುವಷ್ಟರಲ್ಲೇ ಕಳ್ಳರು ಓಡಿ ಹೋಗಿದ್ದಾರೆ.




ಇಂಧನ ಬೆಲೆಯಲ್ಲಿನ ವಿಪರೀತ ಹೆಚ್ಚಳದಿಂದ ಕಂಗಾಲಾಗಿರುವ ಗ್ರಾಹಕರು ಇದೀಗ ಪೆಟ್ರೋಲ್ ಕಳ್ಳತನದ ಪ್ರಕರಣಗಳಿಂದ ದಿಕ್ಕುತೋಚದಂತಾಗಿದ್ದಾರೆ. ಪೆಟ್ರೋಲ್-ಡೀಸೆಲ್ ಬೆಲೆಗಳಲ್ಲಿ ಹತ್ತು ರೂ.ಗಳಷ್ಟು ಕಡಿತವಾದ ಕಾರಣಕ್ಕೆ ಪೆಟ್ರೋಲ್ ಬಂಕ್‌ಗಳ ಮಾಲೀಕರು ಹಮ್ಮಿಕೊಂಡಿದ್ದ ಒಂದು ದಿನದ ಸಾಂಕೇತಿಕ ಪ್ರತಿಭಟನೆ ದಿನವೇ ಈ ದುರ್ಘಟನೆ ನಡೆದಿರುವುದು ಜನರ ನಿದ್ದೆಗೆಡಿಸಿದೆ.

# ಸತ್ಸಂಗದಿಂದ ಅಂತಃಕರಣ ಶುದ್ಧಿ

ಮಲೇಬೆನ್ನೂರು, ಜೂ.3- ಸತ್ಸಂಗದಿಂದ ಅಂತಃಕರಣ ಶುದ್ಧಿ ಆಗಲಿದೆ ಎಂದು ಯಲವಟ್ಟಿ ಶ್ರೀ ಗುರು ಸಿದ್ಧಾಶ್ರಮದ ಶ್ರೀ ಯೋಗಾನಂದ ಸ್ವಾಮೀಜಿ ಹೇಳಿದರು.



### ಮಲೇಬೆನ್ನೂರಿನಲ್ಲಿ ಯೋಗಾನಂದ ಶ್ರೀ

ಅವರು ಭಾನುವಾರ ರಾತ್ರಿ ತಮ್ಮ ಆಶ್ರಮದಲ್ಲಿ ಅಮಾವಾಸ್ಯೆ ಪ್ರಯುಕ್ತ ಹಮ್ಮಿಕೊಂಡಿದ್ದ ಸತ್ಸಂಗ ಕಾರ್ಯಕ್ರಮದ ದಿವ್ಯ ನೇತೃತ್ವ ವಹಿಸಿ ಆಶೀರ್ವಚನ ನೀಡಿದರು.

ಮನುಷ್ಯ ಎಷ್ಟೇ ಒತ್ತಡದಲ್ಲಿದ್ದರೂ ಯೋಗ, ಧ್ಯಾನ ಮತ್ತು ಸತ್ಸಂಗದಲ್ಲಿ ತೊಡಗುವುದರಿಂದ ಮನಸ್ಸಿಗೆ ಶಾಂತಿ ಹಾಗೂ ಆರೋಗ್ಯ ವೃದ್ಧಿಯಾಗಲಿದೆ. 84 ಲಕ್ಷ ಜೀವರಾಶಿಗಳಲ್ಲಿ ಮನುಷ್ಯ ಜನ್ಮ ಶ್ರೇಷ್ಠ ಎಂದು ಹಿರಿಯರು ಹೇಳಿದ್ದಾರೆ. ಪಾಪ ಮತ್ತು ಪುಣ್ಯದಿಂದ ಮಿಶ್ರಿತವಾದ ಮನುಷ್ಯ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಲು ಜ್ಞಾನವೆಂಬ ಅರಿವು ಬೆಳೆಸಿಕೊಳ್ಳಬೇಕು. ಜ್ಞಾನ, ಧ್ಯಾನ ಮತ್ತು ದಾನದಿಂದ ಮೋಕ್ಷ ಪಡೆಯಬಹುದೆಂದು ಶ್ರೀ ಯೋಗಾನಂದ ಸ್ವಾಮೀಜಿ ಹೇಳಿದರು.

ಹೊಳೆ ಸಿರಿಗೆರೆಯ ಸಿದ್ದೇಶ್ ಪ್ರಾಸ್ತಾವಿಕವಾಗಿ ಮಾತನಾಡಿ, ಮನುಷ್ಯ ಜನ್ಮದ ಬಗ್ಗೆ ವಿವರವಾಗಿ ತಿಳಿಸಿದರು. ಕುಂಬಳೂರಿನ ಹೆಚ್.ಎಂ.ಸದಾನಂದ್ ಮತ್ತು ಹೆಚ್.ಎಂ.ಸದಾಶಿವ ಮಾತನಾಡಿದರು.

ವಿದ್ಯಾರ್ಥಿ ಎಂ.ಎಸ್.ಶಿವಕುಮಾರ್ ಭಕ್ತಿಗೀತೆ ಹಾಡಿ ಗಮನ ಸೆಳೆದರು. ಕುಂಬಳೂರು ಭಕ್ತರು ದಿನದ ದಾಸೋಹ ದಾನಿಗಳಾಗಿದ್ದರು.

ಗ್ರಾಮದ ಮುರುಗೆಪ್ಪ ಗೌಡ್ರು, ಜಿ ಬಸಪ್ಪ ಮೇಷ್ಟ್ರು, ಹೊಸಮನಿ ಮಲ್ಲಪ್ಪ, ಎ.ಸುರೇಶ್, ಕೆ. ಮಂಜಪ್ಪ, ಡಿ.ರಾಜಪ್ಪ, ಶಿಕ್ಷಕ ಬಸಯ್ಯ, ಕುಂಬಳೂರಿನ ಕೆ.ಚಿಕ್ಕಣ್ಣ, ಕೆ.ಕುಬೇರಪ್ಪ, ಕೆ. ಪರಮೇಶ್ವರಪ್ಪ, ಎಸ್.ಯೋಗೇಂದ್ರಪ್ಪ, ಕೆ. ಆಂಜನೇಯ, ಕೆ.ಕಾಮರಾಜ, ಹೊಳೆ ಸಿರಿಗೆರೆಯ ಮಾಗೋಡ್ ಈಶ್ವರಪ್ಪ, ಮಾಗೋಡ್ ಸಿದ್ದಪ್ಪ, ಹನುಮಂತಗೌಡ, ಕುಂದೂರು ಮಂಜಪ್ಪ, ಪತ್ರಕರ್ತ ಜಿಗಳಿ ಪ್ರಕಾಶ್, ರಂಗಪ್ಪ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು. ಪಿಎಸಿಎಸ್ ಸಿಇಓ ಎಂ.ಶೇಖರಪ್ಪ ಸ್ವಾಗತಿಸಿ, ವಂದಿಸಿದರು.

## ಹರಿಹರ: ರೈತರಿಂದ ತೋಟಗಾರಿಕೆ ಬೆಳೆ ವಿಮೆ ನೋಂದಣಿಗೆ ಅವಕಾಶ

ದಾವಣಗೆರೆ, ಜೂ. 2- ಇಂದಿನಿಂದ ಇದೇ ದಿನಾಂಕ 6 ರವರೆಗೆ ಮಂಡ್ಯ ಜಿಲ್ಲೆಯ ಕ್ಯಾತನಹಳ್ಳಿಯ ವಿಶ್ವೇಶ್ವರಯ್ಯ ಕ್ರಿಡಾಂಗಣದಲ್ಲಿ ನಡೆಯುವ ಅಖಿಲ ಭಾರತ ವೃತ್ತಿಪರ ಪುರುಷರ ಹೊನಲು ಬೆಳಕಿನ ಖೋ-ಖೋ ಪಂದ್ಯಾವಳಿಯಲ್ಲಿ ಭಾಗವಹಿ ಸುವ ರಾಜ್ಯ ಕೆಎಸ್‌ಕೆಕೆಎ 12 ತಂಡಕ್ಕೆ ದಾವಣಗೆರೆ ಕ್ರೀಡಾ ವಸತಿ ನಿಲಯದ ಖೋ-ಖೋ ಕ್ರೀಡಾಪಟುಗಳಾದ ಅರ್ಜುನ್, ವೀರೇಶ್ ಮತ್ತು ರಾಜ್ಯ ಪ್ರೆಸಿಡೆಂಟ್ಸ್ 12 ತಂಡಕ್ಕೆ ವೇಣು ಗೋಪಾಲ್ ಎಸ್, ಆಸೀಫ್ ಕುನ್ನೂರ ಮತ್ತು ಮದನ್ ಇವರುಗಳು ಆಯ್ಕೆಯಾಗಿದ್ದಾರೆ. ಈ ಕ್ರೀಡಾಪಟುಗಳಿಗೆ ಇಲಾಖೆಯ ಖೋ-ಖೋ ತರಬೇತುದಾರರಾದ ಜೆ.ರಾಮಲಿಂಗಪ್ಪ ತರಬೇತಿ ನೀಡುತ್ತಿದ್ದಾರೆ. ಪಂದ್ಯಾವಳಿಯಲ್ಲಿ ಭಾಗವಹಿಸಲಿರುವ ಕ್ರೀಡಾಪಟುಗಳಿಗೆ ಸಹಾಯಕ ನಿರ್ದೇಶಕರಾದ ಸುಚೇತಾ ಎಂ. ನೆಲವಿಗಿ, ಎಲ್ಲಾ ತರಬೇತುದಾರರು ಹಾಗೂ ಸಿಬ್ಬಂದಿ ವರ್ಗದವರು ಶುಭ ಹಾರೈಸಿದ್ದಾರೆ.

## ಆಹಾರ ಖರೀದಿ ಸಾಮರ್ಥ್ಯವಿಲ್ಲ

(1ನೇ ಪುಟದಿಂದ) ಮಾಂಸ, ಕೆಂಪು ಮಾಂಸ ಹಾಗೂ ಸಕ್ಕರೆ ಪಾನೀಯಗಳ ಸೇವನೆ ಹೆಚ್ಚಾಗಿದೆ ಎಂದು ವರದಿ ತಿಳಿಸಿದೆ. ಶೇ.71ರಷ್ಟು ಭಾರತೀಯರಿಗೆ ಆರೋಗ್ಯಕರ ಆಹಾರ ಖರೀದಿಸುವ ಸಾಮರ್ಥ್ಯ ಇಲ್ಲ. ಈ ವಿಷಯದಲ್ಲಿ ಜಾಗತಿಕ ಸರಾಸರಿ ಶೇ.42ರಷ್ಟಿದೆ ಎಂದು ಗ್ಲೋಬಲ್ ನ್ಯೂ ಟ್ರಿಷನ್ ರಿಪೋರ್ಟ್ 2021ರಲ್ಲಿ ತಿಳಿಸಲಾಗಿದೆ.

## ನಗರದಲ್ಲಿ ಇಂದು ನಂದಿಗುಡಿ ಭಕ್ತರ ಸಭೆ

ನಂದಿಗುಡಿ ಬೃಹನ್ಮಠದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಮಠದ ಅಭಿವೃದ್ಧಿ ಹಾಗೂ ದಾವಣಗೆರೆಯಲ್ಲಿರುವ ನಂದಿಗುಡಿ ಹಾಸ್ಟೆಲ್ ಅಭಿವೃದ್ಧಿ ಬಗ್ಗೆ ಚರ್ಚಿಸುವ ಕುರಿತು ನಂದಿಗುಡಿ ಮಠದ ಭಕ್ತರ ಸಭೆಯನ್ನು ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಕರೆಯಲಾಗಿದೆ.


**19ನೇ ಪುಣ್ಯತಿಥಿ**



**ನೇತ್ರದಾನಿ ಶ್ರೀಮತಿ ಟಿ.ಆರ್. ಕೋಮಲಾಬಾಯಿ**

ಸದಾ ನಿಮ್ಮ ನೆನಪಿನಲ್ಲಿ

**ಮಕ್ಕಳು, ಸೊಸೆ, ಅಳಿಯ, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಖುಷಿ, ಶಿಖಾ, ನಾಭ್ಯ, ಕಬೀರ್ ಬಂಧು-ಮಿತ್ರರು, ಹಿತೈಷಿಗಳು.**


# ಆಲೂರಿನಲ್ಲಿ ಶಾಲಾ ಮಕ್ಕಳಿಗೆ ಉಚಿತ ನೋಟ್ ಬುಕ್ ವಿತರಣೆ

## ಆಲೂರು ನಿಂಗರಾಜ್ ರಾಜಕೀಯವಾಗಿ ಜನನಾಯಕರಾಗಿ ಹೊರಹೊಮ್ಮುತ್ತಾರೆ: ಬಸವಪ್ರಭು ಶ್ರೀ ಭವಿಷ್ಯ

ದಾವಣಗೆರೆ, ಜೂ.3- ಜನರ ಬಯಕೆ ಇದೆ, ಜನರೂ ಸಹ ಇಷ್ಟಪಟ್ಟಿದ್ದಾರೆ. ಮುಂಬರುವ ದಿನಗಳಲ್ಲಿ ಆಲೂರು ನಿಂಗರಾಜ್ ಜನನಾಯಕರಾಗಿ ಹೊರಹೊಮ್ಮಲಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ಅವರಿಗೆ ಒಳ್ಳೆಯದಾಗಲಿ. ಸಮಾಜ ಸೇವೆಯನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗಲಿ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಆಶೀರ್ವದಿಸಿದರು.





ತಾಲ್ಲೂಕಿನ ಆಲೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಿಜೆಪಿ ಪ್ರಬಲ ಆಕಾಂಕ್ಷಿ ಆಲೂರು ನಿಂಗರಾಜ್ ಅವರ 50 ನೇ ವರ್ಷದ ಹುಟ್ಟು ಹಬ್ಬದ ಅಂಗವಾಗಿ ನೆನ್ನೆ ಏರ್ಪಡಿಸಿದ್ದ ಸೇವಾ ಸಾಧಕರಿಗೆ ಸನ್ಮಾನ, ಶಾಲಾ ಮಕ್ಕಳಿಗೆ ಉಚಿತ ನೋಟ್ ಬುಕ್ ವಿತರಣೆ ಹಾಗೂ ಸಸಿ ನೆಡುವ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು..

ಆಲೂರು ನಿಂಗರಾಜ್ ಅವರಲ್ಲಿ ಬುದ್ಧನ ಮಾನವೀಯತೆ ಇದೆ. ಬಸವಣ್ಣನವರ ಸಮಾನತೆ ಇದೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ವೈಚಾರಿಕತೆ ಅಡಗಿದೆ. ಸಮಾಜ, ದೇಶ ನನಗೇನು ಕೊಟ್ಟಿದೆ ಎಂದು ಬಗ್ಗೆ ತಲೆಕೆಡಿಸಿಕೊಳ್ಳದೇ ದೇಶಕ್ಕೆ ಹಾಗೂ ಸಮಾಜಕ್ಕೆ ನಾನು ಕೊಡುಗೆ ನೀಡಬೇಕೆಂಬ ಅದಮ್ಯ ಬಯಕೆಯಿಂದ ಸಮಾಜ ಸೇವೆ ಮಾಡುತ್ತಿದ್ದಾರೆ. ಅವರಿಗೆ ಭವಿಷ್ಯದಲ್ಲಿ ಎಲ್ಲಾ ವಿಚಾರಗಳಲ್ಲಿ ಒಳಿತಾಗಲಿ ಎಂದು ಶ್ರೀಗಳು ಹಾರೈಸಿದರು.

ಮತ್ತೊಬ್ಬರಿಗೆ ಒಳಿತು ಮಾಡುವ, ಕಷ್ಟದಲ್ಲಿರುವವರ ಕಣ್ಣೀರು ಒರೆಸುವ ಬಡವರು, ಶೋಷಿತರು, ಹಿಂದುಳಿದ ವರ್ಗಗಳ ಜನರ ಸೇವೆ ಮಾಡುವ ಕಾರ್ಯ ನಿಜಕ್ಕೂ ಅನನ್ಯವಾದದ್ದು. ಪ್ರತಿಯೊಬ್ಬ ಮನುಷ್ಯನು ಹುಟ್ಟಿದ ಮೇಲೆ ಸಾಯಲೇಬೇಕು. ಹುಟ್ಟು ಆಕಸ್ಮಿಕ, ಸಾವು ನಿಶ್ಚಿತ. ಎಲ್ಲರೂ ಬದುಕಿದ್ದಾಗ ಒಳ್ಳೆಯ ಸೇವೆ ಮಾಡಬೇಕು. ಆಗ ಮಾತ್ರ ಬದುಕಿನಲ್ಲಿ ಸಾರ್ಥಕತೆ ಬರುತ್ತದೆ. ಈ ನಿಟ್ಟಿನಲ್ಲಿ ಆಲೂರು ನಿಂಗರಾಜ್ ಮುಂದುವರೆಯುತ್ತಿರುವುದು ಸಂತಸದ ವಿಚಾರ ಎಂದು ತಿಳಿಸಿದರು.

ಬಸವಣ್ಣ, ಅಂಬೇಡ್ಕರ್, ಬುದ್ಧನ ಆದರ್ಶಗಳನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು. ಅವರು ಪರೋಪಕಾರಿಯಾಗಿ ಬದುಕಿದ ಪರಿಣಾಮ ಆದರ್ಶ ಪುರುಷರಾಗಿದ್ದಾರೆ. ಅವರನ್ನು ನಾವೆಲ್ಲರೂ ಈಗಲೂ ನೆನಪು ಮಾಡಿಕೊಳ್ಳುತ್ತೇವೆ ಎಂದು ಶ್ರೀಗಳು ಹೇಳಿದರು.

ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಿಜೆಪಿ ಪ್ರಬಲ ಆಕಾಂಕ್ಷಿ ಆಲೂರು ನಿಂಗರಾಜ್ ಮಾತನಾಡಿ, ಗ್ರಾಮದ ಸ್ನೇಹ ಬಳಗ ಹಮ್ಮಿಕೊಂಡಿರುವ ಈ ಕಾರ್ಯಕ್ರಮ ತುಂಬಾನೇ ಖುಷಿ ಕೊಟ್ಟಿದೆ. ಮುಂಬರುವ ದಿನಗಳಲ್ಲಿ ಗ್ರಾಮಕ್ಕೆ ಏನನ್ನಾದರೂ ಕೊಡುಗೆ ನೀಡಬೇಕೆಂಬುದಕ್ಕೆ ಇದು ಎಚ್ಚರಿಕೆ ಗಂಟೆಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ವಿಶೇಷ ಆಹ್ವಾನಿತರಾಗಿ ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ. ಎಂ. ಸುರೇಶ್, ಹಾವೇರಿ ಜಿಲ್ಲಾ ಬಿಜೆಪಿ ಉಸ್ತುವಾರಿ ಎಲ್.ಎನ್. ಕಲ್ಲೇಶ್, ಮುಖ್ಯ ಅತಿಥಿಗಳಾಗಿ ಆಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ನಾಗಮ್ಮ ಮಂಜುನಾಥ್, ಉಪಾಧ್ಯಕ್ಷ ಶಂಕ್ರಪ್ಪ, ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಿಜೆಪಿ ಮಂಡಲದ ಪ್ರಧಾನ ಕಾರ್ಯದರ್ಶಿ ಮಹಾಬಲೇಶ್ವರ ಹಿಂಡಸಘಟ್ಟ, ಮೆಳ್ಳೇಕಟ್ಟೆ ನಾಗರಾಜ್, ಬಸಾಪುರ ರಮೇಶ್, ಕತ್ತಲಗೆರೆ ಅನಿಲ್‌ಕುಮಾರ್, ಪತ್ರಕರ್ತರಾದ ಮಲ್ಲಿಕಾರ್ಜುನ್ ಕಬ್ಬೂರು, ಸುರೇಶ್ ಕುಣೆಬೆಳಕೆರೆ, ಮೂಗಪ್ಪ, ಕೆ.ಎಸ್. ಚನ್ನಬಸಪ್ಪ, ಆನಂದಪ್ಪ, ಸೋಮಣ್ಣ, ಕೋರಿ ಸಿದ್ದಪ್ಪ, ಕೃಷ್ಣಪ್ಪ, ಮಾರಪ್ಪ, ಗೊಲ್ಲರ ಹನುಮಂತಪ್ಪ ಮತ್ತಿತರರಿದ್ದರು.

## ಕೆರೆಯಲ್ಲಿ ಸ್ನಾನ ಮಾಡಲು ಹೋದ ವ್ಯಕ್ತಿ ಸಾವು

ಮಲೇಬೆನ್ನೂರು ಜೂ.3 - ಕೆರೆಯಲ್ಲಿ ಸ್ನಾನ ಮಾಡಲು ಹೋಗಿದ್ದಾಗ ಮೀನಿನ ಬಲೆಯಲ್ಲಿ ಸಿಲುಕಿ ವ್ಯಕ್ತಿಯೊಬ್ಬ ಮೃತಪಟ್ಟಿರುವ ಘಟನೆ ದೇವರ ಬೆಳಕೆರೆ ಪಿಕಪ್ ಡ್ಯಾಮ್ ನಲ್ಲಿ ಶುಕ್ರವಾರ ನಡೆದಿದೆ. ತಿಪ್ಪಣ್ಣ (52) ಮೃತ ದುರ್ದೈವಿ. ಮೃತ ವ್ಯಕ್ತಿ ತಿಪ್ಪಣ್ಣ ಪ್ರತಿನಿತ್ಯವೂ ಮುಂಜಾನೆ ಕೆರೆಗೆ ಸ್ನಾನ ಮಾಡಲು ಹೋಗುತ್ತಿದ್ದ. ಇಂದು ಮುಂಜಾನೆ ಸ್ನಾನ ಮಾಡಲು ಹೋಗಿದ್ದಾಗ ಕಾಲುಜಾರಿ ಮೀನಿನ ಬಲೆಗೆ ಸಿಲುಕಿಕೊಂಡು ಸಾವನ್ನಪ್ಪಿದ್ದಾನೆ. ಈತ ಕೂಲಿ ಕಾರ್ಮಿಕನಾಗಿದ್ದಾನೆ. ಮೂವರು ಹೆಣ್ಣು ಮಕ್ಕಳು, ಪತ್ನಿ ಇದ್ದಾರೆ. ಘಟನಾ ಸ್ಥಳಕ್ಕೆ ತಹಶೀಲ್ದಾರ್ ಡಾ. ಬಿ. ಎಂ. ಅಶ್ವತ್ಥ್ ಮತ್ತು ಹರಿಹರ ಗ್ರಾಮಾಂತರ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿದ್ದಾರೆ


**ಪುಣ್ಯಸ್ಮರಣೆ**



**ಕೆ.ಜಿ. ಮಹೇಶ್ವರಪ್ಪ**

ರಾಜ್ಯ ಸಭಾ ಮಾಜಿ ಸದಸ್ಯರು

*ನೀವು ನಮ್ಮನ್ನು ಅಗಲಿ ಇಂದಿಗೆ ಹತ್ತು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ,*

ಮಗಳು : ಉಷಾ ಪರಮೇಶ್, ಅಳಿಯ : ಎ.ಜಿ. ಪರಮೇಶ್ವರಪ್ಪ

ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು :

ಡಾ|| ಶ್ರೀಮತಿ ದೀಪಾ ಪಾಟೀಲ್, ಡಾ|| ಆನಂದ್ ಪಾಟೀಲ್, ಚಿ|| ಅನಿಷ್, ಚಿ|| ದಕ್ಷ, ಬಿಜಾಪುರ.

ಶ್ರೀಮತಿ ರೂಪಾ ಕಿರಣ್, ಶ್ರೀ ಎಂ.ಆರ್. ಕಿರಣ್, ಚಿ|| ಪ್ರಣವ್, ಕು|| ಆನ್ಯಾ, U.S.A.

ಕುರ್ಕಿ ಗೌಡ್ರ ವೇದಮೂರ್ತಿ ಹಾಗೂ ಕುಟುಂಬ ವರ್ಗದವರು.



**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**



|| ಶ್ರೀ ಆಂಜನೇಯ ಪ್ರಸನ್ನ ||

ದಾವಣಗೆರೆ ವಿದ್ಯಾನಗರ ವಾಸಿ **ಹಳೇಬಾತಿ ದಿ. ಗಿರಿಯಪ್ಪಗೌಡ್ರು** ಇವರ ಮಗನಾದ

**ಶ್ರೀ ಜಿ. ವಿರುಪಾಕ್ಷಪ್ಪ,** ಪ್ರಾಂಶುಪಾಲರು, ಸೈನ್ಸ್ ಅಕಾಡೆಮಿ ಪಿಯು ಕಾಲೇಜು, ದಾವಣಗೆರೆ. ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 28.05.2022ರ ಶನಿವಾರ ಬೆಳಿಗ್ಗೆ 5 ಗಂಟೆಗೆ ನನ್ನ ಧರ್ಮಪತ್ನಿಯಾದ

**ಶ್ರೀಮತಿ ಕೆ.ಹೆಚ್. ಶಾರದಮ್ಮನವರು**

ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಸಮಾರಾಧನೆಯನ್ನು** ದಿನಾಂಕ 05.06.2022ರ **ಭಾನುವಾರ ಬೆಳಿಗ್ಗೆ 10.30ಕ್ಕೆ ಶಿವಪಾರ್ವತಿ ದೇವಸ್ಥಾನ ಸಮುದಾಯ ಭವನ, ಮುಖ್ಯ ರಸ್ತೆ, ವಿದ್ಯಾನಗರ, ದಾವಣಗೆರೆ** ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು:**

**♦ ಶ್ರೀ ಜಿ. ವಿರುಪಾಕ್ಷಪ್ಪನವರು ♦ ಡಾ|| ವಿ. ದೀಪ್ತಿ ♦ ಡಾ|| ಬಿ.ಎಸ್. ರಾಜಶೇಖರ್ ♦ ಡಾ|| ವಿ. ಚೈತನ್ಯ ♦ ಡಾ|| ಬಿ. ನಿಕೇತನ್**

**ಮೊಮ್ಮಕ್ಕಳು, ಗೌಡ್ರು ವಂಶಸ್ಥರು, ಹಳೇಬಾತಿ.**


**ಕೂಲಂಬಿ ವಂಶಸ್ಥರು, ಕಂದಗಲ್ಲು ಹಾಗೂ ಬಂಧು–ಮಿತ್ರರು. ಮೊ: 99807 18082**

ಈಗಾಗಲೇ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಲು ವಿನಂತಿ.


## ನಗರದಲ್ಲಿ ಇಂದು ಅವಿನಾಶ್ ಸಂವಾದ

ಯುಪಿಎಸ್‌ಸಿಯಲ್ಲಿ ರ್‍ಯಾಂಕ್ ಗಳಿಸಿರುವ ಅವಿನಾಶ್ ವಿ. ಅವರ ಜೊತೆ ಸಂವಾದವು ಇಂದು ಬೆಳಿಗ್ಗೆ 10.30 ಕ್ಕೆ ವಿನ್ನರ್ಸ್ ಕರಿಯರ್ ಅಕಾಡೆಮಿಯಲ್ಲಿ ನಡೆಯಲಿದೆ. ಅತಿಥಿಗಳು : ಬಿ. ವಾಮದೇವಪ್ಪ, ಡಾ. ಅನಿತಾ ದೊಡ್ಡಗೌಡರ್, ರಾಮಚಂದ್ರರಾವ್.

### ಸುಲೋಚನಮ್ಮ ನಿಧನ



ದಾವಣಗೆರೆ ಕೆ.ಬಿ. ಬಡಾವಣೆ, ರಾಯರ ಮಠ ಹತ್ತಿರದ ವಾಸಿ, ಸಾಯಿ ಎಂಟರ್‌ಪ್ರೈಸಸ್ ಮಾಲೀಕ ಅಜೇಯ್ ಅವರ ತಾಯಿ, ದಿ. ರಾಧಕೃಷ್ಣ ಶೆಟ್ಟಿ ಅವರ ಧರ್ಮಪತ್ನಿ, ಶ್ರೀಮತಿ ಆರ್. ಸುಲೋಚನಮ್ಮ (84) ಅವರು ದಿನಾಂಕ: 03.06.2022ರ ಶುಕ್ರವಾರ ನಿಧನರಾಗಿದ್ದಾರೆ. ಐವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು, ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04.06.2022ರ ಶನಿವಾರ ಬೆಳಿಗ್ಗೆ 10 ಗಂಟೆಗೆ ನಗರದ ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

### ಬಸವನಾಳು ರೇವಪ್ಪರ ರೇವಪ್ಪಯ್ಯ ನಿಧನ



ದಾವಣಗೆರೆ ತಾಲ್ಲೂಕು ಬಸವನಾಳು ಗ್ರಾಮದ ವಾಸಿ ಬೇತೂರು ರೈತ ಉತ್ಪನ್ನ ಕೇಂದ್ರದ ನಿರ್ದೇಶಕರಾದ ಬಿ.ಜಿ ಬಸವರಾಜಯ್ಯನವರ ತಂದೆ ರೇವಪ್ಪರ ರೇವಪ್ಪಯ್ಯ ಇವರು ದಿನಾಂಕ : 3.6.2022 ರ ಶುಕ್ರವಾರ ತಡ ರಾತ್ರಿ 12.50ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 70 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 4.6.2022 ರ ಶನಿವಾರ ಮಧ್ಯಾಹ್ನ 2 ಗಂಟೆಗೆ ಮೃತರ ಸ್ವಗ್ರಾಮ ಬಸವನಾಳು ಗ್ರಾಮದ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

# ಹೈದರಾಬಾದ್: ಅಪ್ರಾಪ್ತೆಯ ಮೇಲೆ ಸಾಮೂಹಿಕ ಅತ್ಯಾಚಾರ

## ಶಾಸಕರು, ಪ್ರಭಾವಿಗಳ ಮಕ್ಕಳು ಭಾಗಿ ಆರೋಪ

ಹೈದರಾಬಾದ್, ಜೂ. 3 – ಅಪ್ರಾಪ್ತ ಬಾಲಕಿಯೊಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ನಡೆದ ಘಟನೆ ಹೈದರಾಬಾದ್‌ನಲ್ಲಿ ನಡೆದಿದ್ದು, ಇದರಲ್ಲಿ ತೆಲಂಗಾಣದ ಪ್ರಭಾವಿ ರಾಜಕಾರಣಿಗಳು ಹಾಗೂ ಅಧಿಕಾರಿಗಳ ಮಕ್ಕಳು ಭಾಗಿಯಾಗಿದ್ದಾರೆಂದು ಆರೋಪಿಸಲಾಗಿದೆ.

ಹೈದರಾಬಾದ್‌ನ ಜುಬಿಲೀ ಹಿಲ್ಸ್ ಪ್ರದೇಶದಲ್ಲಿ ಬಾಲಕಿಗೆ ಲಿಫ್ಟ್ ನೀಡುವುದಾಗಿ ಕರೆದೊಯ್ಯುವಾಗ ಸರದಿ ಅತ್ಯಾಚಾರ ನಡೆಸಲಾಗಿದೆ ಎಂದು ಆರೋಪಿಸಲಾಗಿದೆ.

ಮೇ 31ರಂದು ಈ ಘಟನೆ ನಡೆದಿದೆ ಎನ್ನಲಾಗಿದೆ. ಇದುವರೆಗೂ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರನ್ನೂ ಬಂಧಿಸಿಲ್ಲ. ಘಟನೆಯ ವಿರುದ್ಧ ಬಿಜೆಪಿ ಕಾರ್ಯಕರ್ತರು ಇಲ್ಲಿನ ಪೊಲೀಸ್ ಠಾಣೆಯ ಎದುರು ಪ್ರತಿಭಟನೆ ನಡೆಸಿದ್ದಾರೆ.

ಆರೋಪಿಗಳಲ್ಲಿ ಓರ್ವ ಎಂ.ಐ.ಎಂ. ಪಕ್ಷದ ಶಾಸಕರ ಮಗ. ಇನ್ನೋರ್ವ ಟಿ.ಆರ್.ಎಸ್. ಪಾರ್ಟಿಯ ಪ್ರಮುಖ ನಾಯಕನ ಪುತ್ರನೆಂದು ಕಂಡು ಬರುತ್ತಿದೆ. ವಕ್ಫ್ ಮಂಡಳಿಯ ಅಧ್ಯಕ್ಷರ ಮಗ ಕೃತ್ಯದಲ್ಲಿ ಭಾಗಿಯಾಗಿದ್ದಾನೆ ಎಂದು ಬಿಜೆಪಿ ವಕ್ತಾರ ಕೃಷ್ಣ ಸಾಗರ್ ಆರೋಪಿಸಿದ್ದಾರೆ.

ಸ್ನೇಹಿತರ ಜೊತೆ ಕೂಟವೊಂದರಲ್ಲಿ ಪಾಲ್ಗೊಳ್ಳಲು ಬಾಲಕಿ ತೆರಳಿದ್ದು, ಸಮಯಕ್ಕೆ ಮೊದಲೇ ಅಲ್ಲಿಂದ ಹೊರಟಿದ್ದಾರೆ. ಆಗ ಹುಡುಗರ ತಂಡ ಕಾರಿನಲ್ಲಿ ಕರೆದೊಯ್ದಿದೆ. ಕಾರಿನಲ್ಲಿ ಸರದಿಯಲ್ಲಿ ಅತ್ಯಾಚಾರ ನಡೆಸಲಾಗಿದೆ ಎಂದು ಆರೋಪಿಸಲಾಗಿದೆ.

ನಂತರ ಬಾಲಕಿಯನ್ನು ಪಬ್ ಒಂದರ ಬಳಿ ಬಿಟ್ಟು ಹೋಗಲಾಗಿದೆ. ಮಗಳನ್ನು ಕರೆದೊಯ್ಯಲು ಬಂದ ತಂದೆ, ಕತ್ತಿನ ಮೇಲೆ ಆಗಿರುವ ಗಾಯಗಳ ಬಗ್ಗೆ ವಿಚಾರಿಸಿದ್ದಾರೆ. ಆಗ ಬಾಲಕಿ ತನ್ನ ಮೇಲೆ ಹುಡುಗರು ಹಲ್ಲೆ ನಡೆಸಿರುವುದಾಗಿ ತಿಳಿಸಿದ್ದಾರೆ.

ಹುಡುಗಿಯ ತಂದೆಯ ದೂರಿನ ಆಧಾರದ ಮೇಲೆ ಪೊಲೀಸರು ಮೊದಲು ದುರ್ವರ್ತನೆಯ ದೂರು ದಾಖಲಿಸಿಕೊಂಡಿದ್ದರು. ನಂತರ ಅದನ್ನು ಅತ್ಯಾಚಾರದ ದೂರಾಗಿ ಪರಿವರ್ತಿಸಲಾಗಿದೆ.

ಮೊದಲು ತಂದೆಗೂ ಏನಾಯಿತು ಎಂಬುದು ಗೊತ್ತಿರಲಿಲ್ಲ. ಬಾಲಕಿ ಏನನ್ನೂ ಹೇಳುವ ಸ್ಥಿತಿಯಲ್ಲಿ ಇರಲಿಲ್ಲ. ಬಾಲಕಿಯನ್ನು ಮಹಿಳಾ ಅಧಿಕಾರಿಗಳ ಜೊತೆ ಕಳಿಸಲಾಯಿತು. ನಂತರದಲ್ಲಿ ಇಡೀ ಘಟನೆಯ ಬಗ್ಗೆ ತಿಳಿದಿದೆ ಎಂದು ಪೊಲೀಸ್ ಅಧಿಕಾರಿ ಜೋಯಲ್ ಡೇವಿಸ್ ಹೇಳಿದ್ದಾರೆ.

ಓರ್ವ ಹುಡುಗನನ್ನು ಮಾತ್ರ ಬಾಲಕಿ ಗುರುತಿಸಿದ್ದು, ಸಿ.ಸಿ.ಟಿ.ವಿ. ಚಿತ್ರಣ ಹಾಗೂ ತಾಂತ್ರಿಕ ಸಾಕ್ಷಿಗಳನ್ನು ಆಧರಿಸಿ ಉಳಿದ ಶಂಕಿತರನ್ನು ಪತ್ತೆ ಮಾಡಲಾಗಿದೆ ಎಂದವರು ತಿಳಿಸಿದ್ದಾರೆ.

# ಶೂ ಜೊತೆಗೆ ಕ್ಯಾರಿ ಬ್ಯಾಗ್‌ಗೂ ಬಿಲ್: 5 ಸಾವಿರ ರೂ. ದಂಡ

ದಾವಣಗೆರೆ, ಜೂ.3 ಎರಡು ಜೊತೆ ಶೂ ಹಾಗೂ ಬ್ಯಾಗ್ ಖರೀದಿಸಿದಾಗ ಅನುಮತಿ ಇಲ್ಲದೇ ಕ್ಯಾರಿಬ್ಯಾಗ್‌ನ ಶುಲ್ಕ ರೂ.7 ಅನ್ನು ಬಿಲ್ ಜೊತೆಗೆ ಸೇರಿಸಿ ಪಡೆದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ನೊಂದ ಗ್ರಾಹಕರಿಗೆ ರೂ.5 ಸಾವಿರ ಪರಿಹಾರ ಹಾಗೂ ರೂ.3 ಸಾವಿರ ದಾವೆಯ ಖರ್ಚನ್ನು ನೀಡುವಂತೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ಆದಿತ್ಯ ಬಿರ್ಲಾ ಫ್ಯಾಷನ್ ಅಂಡ್ ರಿಟೇಲ್ ಕಂಪನಿ 'ಪ್ಯಾಂತಲೂನ್ಸ್' ಮಳಿಗೆಗೆ ನಿರ್ದೇಶನ ನೀಡಿದೆ.

ಹರಿಹರದ ವಕೀಲರಾದ ನೀತು ಎಚ್.ಬಿ. ಅವರು 2020ರ ಫೆಬ್ರುವರಿ 1 ರಂದು ಶಾಮನೂರು ರಸ್ತೆಯಲ್ಲಿರುವ 'ಪ್ಯಾಂತಲೂನ್ಸ್' ಮಳಿಗೆಯಲ್ಲಿ ಎರಡು ಶೂ ಹಾಗೂ ಬ್ಯಾಗ್ ಖರೀದಿಸಿದ್ದರು. ರೂ.2,004 ಬಿಲ್‌ನಲ್ಲಿ ಕ್ಯಾರಿಬ್ಯಾಗ್‌ಗಾಗಿ ರೂ. 7 ಸೇರಿಸಲಾಗಿತ್ತು. ಕ್ಯಾರಿಬ್ಯಾಗ್ ಮೇಲೆ ಕಂಪನಿಯ ಹೆಸರು ನಮೂದಿಸಿರುವುದರಿಂದ ಬ್ಯಾಗ್‌ನ ಶುಲ್ಕವನ್ನು ಪಡೆಯದಂತೆ ಮಾಡಿದ್ದ ಮನವಿಗೆ ಮಳಿಗೆಯ ಅಧಿಕಾರಿಗಳು ಕಿವಿಗೊಡಲಿಲ್ಲ.

ಪ್ರಕರಣದ ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷೆ ಎಚ್.ಎನ್.ಮೀನಾ ಹಾಗೂ ಸದಸ್ಯ ತ್ಯಾಗರಾಜನ್ ಸಿ.ಎಸ್ ಅವರು, ಕಂಪನಿಯು ಸೇವಾ ಲೋಪವೆಸಗಿದೆ ಎಂದು ಅಭಿಪ್ರಾಯಪಟ್ಟಿದೆ. ಕ್ಯಾರಿಬ್ಯಾಗ್‌ಗೆ ವಿಧಿಸಿದ್ದ ರೂ.7 ಅನ್ನು ವಾಪಸ್ ನೀಡಬೇಕು. ಜೊತೆಗೆ ದೈಹಿಕ ಹಾಗೂ ಮಾನಸಿಕ ತೊಂದರೆ ನೀಡಿರುವುದಕ್ಕೆ ರೂ.5 ಸಾವಿರ ಪರಿಹಾರ ಮತ್ತು ದಾವೆ ವೆಚ್ಚವಾಗಿ ರೂ.3 ಸಾವಿರವನ್ನು 30 ದಿನಗಳ ಒಳಗೆ ನೀಡಬೇಕು. ಸಕಾಲಕ್ಕೆ ಪಾವತಿಸದಿದ್ದರೆ ಶೇ.6ರಷ್ಟು ಬಡ್ಡಿ ಸಹಿತರ ನೀಡಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಅಧಿಕಾರಿಗಳು ಮಳಿಗೆಗೆ ಕಾಲ ಕಾಲಕ್ಕೆ ತೆರಳಿ ಕ್ಯಾರಿ ಬ್ಯಾಗ್ ಶುಲ್ಕ ಪಡೆಯುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಕ್ಯಾರಿ ಬ್ಯಾಗ್‌ಗೆ ಶುಲ್ಕ ಪಡೆಯುವುದಿಲ್ಲ ಎಂಬ ಫಲಕ ಹಾಕಬೇಕು ಎಂದು ಅದೇಶದಲ್ಲಿ ನಿರ್ದೇಶನ ನೀಡಲಾಗಿದೆ. ಗ್ರಾಹಕರ ಪರವಾಗಿ ವಕೀಲ ವಿಜಯೇಂದ್ರ ಎಂ.ಎನ್. ವಾದ ಮಂಡಿಸಿದ್ದರು.

# ಅಂಧಕಾರ ಅಳಿಸುವ ಶಕ್ತಿಯೇ ಗುರು

## ಶರಣ ಸಂಗಮದಲ್ಲಿ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ



ದಾವಣಗೆರೆ, ಜೂ.3- ಗುರು ಎಂದರೆ ಮನುಷ್ಯನ ಮನಸ್ಸಿನೊಳಗೆ ಮುಸುಕಿರುವ ಅಜ್ಞಾನವೆಂಬ ಅಂಧಕಾರವನ್ನು ಅಳಿಸುವ ಮಹಾನ್ ಶಕ್ತಿ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು.

ನಗರದ ಶಿವಯೋಗಾಶ್ರಮದಲ್ಲಿ ಶುಕ್ರವಾರ ಸಂಜೆ ಹಮ್ಮಿಕೊಂಡಿದ್ದ ಶರಣ ಸಂಗಮ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಗುರುವೆಂದರೆ ಮೋಹದ ಬಲೆಯಲ್ಲಿ ಬಿದ್ದು ಒದ್ದಾಡುತ್ತಿರುವ ಮನುಷ್ಯನನ್ನು ಹೊರ ತೆಗೆಯುವ ಮಹಾ ಕರುಣೆ. ಗುರುವೆಂದರೆ ಅರಿವಿನ ಪರಿಚಯ ಮಾಡಿಕೊಡುವ ಸಾಮರ್ಥ್ಯವುಳ್ಳವನು. ತನ್ನೊಳಗಿನ ಅರಿವನ್ನು ಅರಿತು, ಅರುಹುವವನಿಗೆ ಗುರು ಎನ್ನುತ್ತಾರೆ ಎಂದು ವಿವರಿಸಿದರು.

ಗುರುವಿನಲ್ಲಿ ಬಹು ದೊಡ್ಡ ಶಕ್ತಿ ಇದೆ. ಗುರುವೇ ಸಾಕ್ಷಾತ್ ಪರಬ್ರಹ್ಮನೆಂದು ಗ್ರಂಥಗಳು ಸಾರಿವೆ . ಅಂತಹ ಗುರು ಕರುಣೆ ಪಡೆದವರೇ ಭಾಗ್ಯವಂತರು ಎಂದು ಹೇಳಿದರು.

ಗುರುವಿನ ಕರುಣೆಯಿಂದ ಎಲ್ಲವೂ ಶಿಷ್ಯನಿಗೆ ಸಿಗಲು ಸಾಧ್ಯ. ಗುರು ಕರುಣೆ ಪಡೆದವನು ಲೋಕಕ್ಕೆ ಬೆಳಕಾಗುತ್ತಾನೆ. ತೃಣ ಸಮಾನವಾದ ಶಿಷ್ಯನನ್ನು ಆಕಾಶದೆತ್ತರಕ್ಕೆ ಬೆಳೆಸುವ ಶಕ್ತಿ ಗುರುವಿನಲ್ಲಿದೆ. ಅಂತಹ ಗುರುವಿಗೆ ಮೋಸ ಮಾಡದೇ ತನು-ಮನದಿಂದ ಸೇವೆ ಸಲ್ಲಿಸಿದಾಗ ಜೀವನ ಸಾರ್ಥಕವಾಗುತ್ತದೆ ಎಂದರು.

ಗುರುವಿನ ಮಾರ್ಗದರ್ಶನ ಇಲ್ಲದವನ ಬಾಳು ಅದು ಗೋಳು. ಗುರು ನಮ್ಮೊಳಗಿನ ವಿವೇಕವನ್ನು ಜಾಗೃತಗೊಳಿಸಿ, ಸದಾ ನಿನ್ನ ವಿವೇಕವು ಹೇಳಿದಂತೆ ನೀನು ನಡೆಯಬೇಕೆಂದು ದಾರಿ ತೋರಿಸುತ್ತಾನೆ.

ಗುರುವಾಗುವುದು ಸುಲಭ ಗುರುತ್ವ ಸಾಧಿಸಿದಾಗ ಗುರುವಾಗಿದ್ದಕ್ಕೆ ಸಾರ್ಥಕ. ಗುರುತ್ವವೆಂದರೆ ಮೌಲ್ಯಗಳ ಸಾಕಾರ ರೂಪ. ಜೀವನ ಮೌಲ್ಯಗಳು ಅನುಷ್ಠಾನಗೊಂಡಿರುವ ಗುರುವೇ ವಿಶ್ವಮಾನವನಾಗುತ್ತಾನೆ. ಗುರುತ್ವವನ್ನು ಸಿದ್ಧಿ ಮಾಡಿಕೊಂಡರೆ ವಿಶ್ವಮಾನವರಾಗುತ್ತೇವೆ.

ಮಾನವ ನೋಡಲು ಆಕೃತಿಯಲ್ಲಿ ಮಾನವನಾಗಿದ್ದಾನೆ. ಕೃತಿಯಲ್ಲಿ ಮಾನವರಾಗಬೇಕಿದೆ. ಅಸಹಾಯಕರು, ಅಮಾಯಕರು, ರೋಗಿಗಳಿಗೆ ಸಹಾಯ ಮಾಡುವುದೇ ನಿಜವಾದ ಧರ್ಮ. ಯಾವ ವ್ಯಕ್ತಿಗೂ ಅಪಕಾರ ಮಾಡಬಾರದೆಂಬ (5ನೇ ಪುಟಕ್ಕೆ)

# ಕೊರೊನಾ ಹರಡುವಿಕೆ ಹೆಚ್ಚಳ ತಡೆಯಲು ರಾಜ್ಯಕ್ಕೆ ಸೂಚನೆ

ನವದೆಹಲಿ, ಜೂ. 3 – ಕಳೆದ ವಾರ ಕೊರೊನಾ ಪ್ರಕರಣಗಳು ಹೆಚ್ಚಾಗಿರುವ ಹಾಗೂ ವಾರದ ಪಾಸಿಟಿವಿಟಿ ದರ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಐದು ರಾಜ್ಯಗಳಿಗೆ ಪತ್ರ ಬರೆದಿರುವ ಕೇಂದ್ರ ಸರ್ಕಾರ, ಸೋಂಕು ಹರಡದಂತೆ ಎಚ್ಚರಿಕೆ ವಹಿಸಲು ತಿಳಿಸಿದೆ.

**ಕರ್ನಾಟಕ ಸೇರಿದಂತೆ ಐದು ರಾಜ್ಯಗಳಿಗೆ ಪತ್ರ ಬರೆದ ಕೇಂದ್ರ ಆರೋಗ್ಯ ಕಾರ್ಯದರ್ಶಿ**

ಕರ್ನಾಟಕ, ತಮಿಳುನಾಡು, ಕೇರಳ, ತೆಲಂಗಾಣ ಹಾಗೂ ಮಹಾರಾಷ್ಟ್ರಗಳಿಗೆ ಪತ್ರ ಬರೆದಿರುವ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್, ಸೋಂಕು ಸ್ಥಳೀಯವಾಗಿ ಹರಡುತ್ತಿರಬಹುದು. ಇದಕ್ಕಾಗಿ ಕಠಿಣ ನಿಗಾ ವಹಿಸಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ.

ಕೊರೊನಾ ವಿರುದ್ಧದ ಹೋರಾಟದಲ್ಲಿ ಈಗ ಗಳಿಸಿರುವ ಮುನ್ನಡೆ ಕೈ ತಪ್ಪದಂತಿರಲು ಅಪಾಯವನ್ನು ಅರಿತು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ ಎಂದು ಭೂಷಣ್ ಹೇಳಿದ್ದಾರೆ.

ಕಳೆದ ಮೂರು ತಿಂಗಳಿಂದ ದೇಶದಲ್ಲಿ ಕೊರೊನಾ ಪ್ರಕರಣಗಳ ಸಂಖ್ಯೆ ನಿರಂತರವಾಗಿ ಇಳಿಮುಖವಾಗಿತ್ತು. ಆದರೆ, ಮೇ 27ಕ್ಕೆ ಅಂತ್ಯವಾದ ವಾರದಲ್ಲಿ 15,708 ಸೋಂಕಿತರು ಕಂಡು ಬಂದಿದ್ದಾರೆ. ಜೂನ್ 3ಕ್ಕೆ ಅಂತ್ಯವಾದ ವಾರದಲ್ಲಿ ಪತ್ತೆಯಾದ ಸೋಂಕಿತರ ಸಂಖ್ಯೆ 21,055ಕ್ಕೆ ಏರಿದೆ ಎಂದವರು ಹೇಳಿದ್ದಾರೆ.

ವಾರದ ಪಾಸಿಟಿವಿಟಿ ದರ ಮೇ 27ರಲ್ಲಿ ಶೇ.0.52 ಇದ್ದದ್ದು, ಜೂನ್ 3ರಂದು ಶೇ.0.73ಕ್ಕೆ ಹೆಚ್ಚಾಗಿದೆ.

ಪರೀಕ್ಷೆ, ನಿಗಾ, ಚಿಕಿತ್ಸಾ ನಿರ್ವಹಣೆ, ಲಸಿಕೆ ಹಾಗೂ ಸಮುದಾಯದ ಜೊತೆ ಕೆಲಸ ಮಾಡುವ ಕುರಿತು ಕಳೆದ ಏಪ್ರಿಲ್ 8ರಂದು ಹೊರಡಿಸಲಾದ ನಿರ್ದೇಶನಗಳನ್ನು ಪಾಲಿಸುವಂತೆ ಭೂಷಣ್ ಹೇಳಿದ್ದಾರೆ.

ಕರ್ನಾಟಕದಲ್ಲಿ ಮೇ 27ಕ್ಕೆ ಅಂತ್ಯವಾದ ವಾರದಲ್ಲಿ 1,003 ಸೋಂಕಿತರು ಕಂಡು ಬಂದಿದ್ದರು. ಜೂನ್ 3ಕ್ಕೆ ಅಂತ್ಯವಾದ ವಾರದಲ್ಲಿ 1,446 ಸೋಂಕಿತರು ಕಂಡು ಬಂದಿದ್ದಾರೆ. ಪ್ರತಿ ವಾರ ಕಂಡು ಬರುವ ಸೋಂಕಿತರ ಸಂಖ್ಯೆಯಲ್ಲಿ ಶೇ.6.87ರ ಹೆಚ್ಚಳವಾಗಿದೆ. ಪಾಸಿಟಿವಿಟಿ ದರ ಶೇ.0.8ರಿಂದ ಶೇ.1.1ಕ್ಕೆ ಹೆಚ್ಚಳವಾಗಿದೆ.

# ಕಾಂಗ್ರೆಸ್ - ಜೆಡಿಎಸ್ ಸ್ವಪ್ರತಿಷ್ಠೆಯಿಂದ ನಾಲ್ಕನೇ ಸ್ಥಾನ ಬಿಜೆಪಿಗೆ ಸಾಧ್ಯತೆ

ಬೆಂಗಳೂರು, ಜೂ. 3 - ರಾಜ್ಯ ವಿಧಾನ ಸಭೆಯಿಂದ ರಾಜ್ಯಸಭೆಗೆ ನಡೆಯುತ್ತಿರುವ ದ್ವೈವಾರ್ಷಿಕ ಚುನಾವಣೆ ಕಾಂಗ್ರೆಸ್ - ಜೆಡಿಎಸ್ ನಾಯಕರ ಸ್ವಪ್ರತಿಷ್ಠೆಯಿಂದ ನಾಲ್ಕನೇ ಸ್ಥಾನವನ್ನು ಬಿಜೆಪಿಗೆ ಸುಲಭ ತುತ್ತು ಮಾಡಿಕೊಡುವ ಸಾಧ್ಯತೆ ಇದೆ. ನಾಲ್ಕನೇ ಸ್ಥಾನಕ್ಕಾಗಿ ಉದ್ದಿಮೆದಾರರೇ ಕಣದಲ್ಲಿ ಇರುವುದರಿಂದ ರಾತ್ರಿ ರಾಜಕಾರಣ ಹಾಗೂ ಕುದುರೆ ವ್ಯಾಪಾರಕ್ಕೆ ಎಡೆಮಾಡಿದೆ.

ಮುಂಬರುವ ವಿಧಾನಸಭೆ ಚುನಾವಣೆ ಸಂದರ್ಭ ಪಕ್ಷದಿಂದ ಪಕ್ಷಕ್ಕೆ ಜಿಗಿಯಲು ತಯಾರಾಗಿರುವ ಶಾಸಕರು ಈ ಚುನಾವಣೆ ಲಾಭ ಪಡೆಯಲು ಈಗಾಗಲೇ ಮುಂದಾಗಿದ್ದಾರೆ.

ಕಾಂಗ್ರೆಸ್ ವರಿಷ್ಠರು ಜೆಡಿಎಸ್ ಅಭ್ಯರ್ಥಿಗೆ ಬೆಂಬಲಿಸಲು ಒಲವು ತೋರಿದರೂ ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಮಾತ್ರ ತಮ್ಮ ಪಟ್ಟು ಬಿಡದೆ ಚುನಾವಣೆಗೆ ಅವಕಾಶ ಮಾಡಿಕೊಟ್ಟಿದ್ದಾರೆ.

**ರಾಜ್ಯಸಭೆ ಚುನಾವಣೆ**

ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆಯುವ ಚುನಾವಣೆಗೆ ನಾಮಪತ್ರ ಹಿಂದಕ್ಕೆ ಪಡೆಯುವ ಕಡೇ ದಿನವಾದ ಇಂದು ಯಾವುದೇ ಅಭ್ಯರ್ಥಿ ತಮ್ಮ ಉಮೇದುವಾರಿಕೆ ಹಿಂದಕ್ಕೆ ಪಡೆಯದೇ ಆರು ಮಂದಿಯು ಕಣದಲ್ಲಿ ಉಳಿದಿದ್ದಾರೆ. ನಾಲ್ಕನೇ ಸ್ಥಾನ ಗೆಲ್ಲಲು ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಬಳಿ ಪೂರ್ಣ ಮತ ಇಲ್ಲದಿದ್ದರೂ ತಮ್ಮ ಅಭ್ಯರ್ಥಿಗಳನ್ನು ಕಣದಲ್ಲಿ ಉಳಿಸಿವೆ.

ಸಂಖ್ಯಾಬಲದ ಆಧಾರದ ಮೇಲೆ ಬಿಜೆಪಿ ಎರಡು, ಕಾಂಗ್ರೆಸ್ ಒಂದು ಸ್ಥಾನವನ್ನು ಮೊದಲ ಪ್ರಾಶಸ್ತ್ಯ ಮತದಲ್ಲೇ ಗೆಲ್ಲುತ್ತಾರೆ.

ಉಳಿದ ಒಂದು ಸ್ಥಾನಕ್ಕೆ ಅತಿ ಹೆಚ್ಚು ಮತಗಳಿದ್ದರೂ, ಗೆಲುವಿನ ದಡ ತಲುಪಲು ಜೆಡಿಎಸ್‌ಗೆ 14 ಮತಗಳ ಅಗತ್ಯ ಇದೆ.

ಜೆಡಿಎಸ್‌ಗಿಂತ ಕಡಿಮೆ ಮತ ಹೊಂದಿರುವ ಬಿಜೆಪಿ ತನ್ನ ಎರಡನೇ ಪ್ರಾಶಸ್ತ್ಯದ ಮತಗಳನ್ನು ಮೂರನೇ ಅಭ್ಯರ್ಥಿಗೆ ಹಾಕಿಸುವುದು. ತನ್ನ ಬಲದ ಮೇಲೆ ಕಾಂಗ್ರೆಸ್, ಜೆಡಿಎಸ್ ಪಕ್ಷದ ಶಾಸಕರ ಮತ ಸೆಳೆಯಲು ಈಗಾಗಲೇ ಚುನಾವಣಾ ತಂತ್ರ ರೂಪಿಸಿದೆ.

ಗೆಲುವು ಸಾಧ್ಯವಿಲ್ಲವೆಂದರೂ ಕಾಂಗ್ರೆಸ್, ಜೆಡಿಎಸ್ ಗೆ ಮುಖಭಂಗ ಮಾಡಲು ತನ್ನ ಅಭ್ಯರ್ಥಿ ಕಣದಲ್ಲೇ ಉಳಿಸಿದೆ.

ಜೂ.10 ರಂದು ನಾಲ್ಕು ಸ್ಥಾನಗಳಿಗೆ ಬಿಜೆಪಿಯಿಂದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ನಟ ಜಗ್ಗೇಶ್, ಉದ್ಯಮಿ ಲೆಹರ್ ಸಿಂಗ್ ಕಣದಲ್ಲಿದ್ದಾರೆ. ಕಾಂಗ್ರೆಸ್‌ನ ಚಿಂತಕರ ಚಾವಡಿಯಲ್ಲಿರುವ ಜೈರಾಮ್ ರಮೇಶ್, ಮನ್ಸೂರ್ ಅಲಿ ಖಾನ್ ಮತ್ತು ಜೆಡಿಎಸ್‌ನಿಂದ ಕುಪೇಂದ್ರರೆಡ್ಡಿ ಅಂತಿಮ ಕಣದಲ್ಲಿ ಉಳಿದಿದ್ದಾರೆ.

# ಮಕ್ಕಳಿಗೆ ಮೂಲ ವಿಚಾರಗಳನ್ನು ತಿದ್ದದೆ ವಾಸ್ತವ ಕಟ್ಟಿಕೊಡಬೇಕು

**(1ನೇ ಪುಟದಿಂದ)** ಮಾಡಿದರೆ ಅದು ಅಪಚಾರವಾಗುತ್ತದೆ. ವಾಸ್ತವ ವಿಚಾರವನ್ನೇ ಪಠ್ಯದಲ್ಲಿ ಸೇರಿಸಬೇಕು. ಬಸವಣ್ಣ ಸಮಾಜಕ್ಕೆ ಕೊಡುಗೆ ನೀಡಿದ್ದಾರೆ. ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಎಲ್ಲಾ ಕ್ಷೇತ್ರಗಳಿಗೂ ಬೇಕಾದಂತಹ ಮಾರ್ಗದರ್ಶನ ನೀಡಿದ್ದಾರೆ. ಬಸವಣ್ಣನ ತತ್ವಗಳು ಪ್ರತಿಯೊಬ್ಬರಿಗೂ ಬೇಕಾಗಿವೆ. ಅವರ ವಚನಗಳೇ ನಮಗೆ ಆಧಾರ. ಆದ್ದರಿಂದ ವಚನಗಳನ್ನು ತಿರುಚುವ ಪ್ರಯತ್ನ ಆಗಬಾರದು. ವಾಸ್ತವ ವಿಚಾರಗಳನ್ನು ಪ್ರಕಟ ಮಾಡುವುದು ಒಳ್ಳೆಯದು ಎಂದು ಹೇಳಿದರು.

ಬಸವಣ್ಣನವರು ಮಾನವನ ಬದುಕಿಗೆ ಬೇಕಾದ ಹಕ್ಕುಗಳು, ತತ್ವಗಳನ್ನು ಕೊಟ್ಟಿರುವುದು ಗಮನಾರ್ಹ. ಎಲ್ಲರ ಬಾಳಿಗೆ ಬೆಳಕಾದವರು ಬಸವಣ್ಣ. ಬಸವಣ್ಣನವರು ಕನ್ನಡಿ ಇದ್ದಂತೆ. ನಾವು ಏನು ಸರಿಪಡಿಸಕೊಳ್ಳಲು ಸಾಧ್ಯವೋ ಅದನ್ನು ಕೊಟ್ಟಿದ್ದಾರೆ. ಇನ್ನೊಬ್ಬರ ಕಡೆ ಬೊಟ್ಟು ಮಾಡುವ ಬದಲಿಗೆ ನಮ್ಮನ್ನು ನಾವು ತಿದ್ದಿಕೊಳ್ಳಲು ಪ್ರಯತ್ನಿಸಿದರೆ ಅದೇ ನಾವು ಬಸವಣ್ಣನವರಿಗೆ ನೀಡುವ ಗೌರವ, ಸಲ್ಲಿಸುವ ಭಕ್ತಿಯಾಗಲಿದೆ ಎಂದರು.

# ಕೌಟುಂಬಿಕ ಕಲಹದಿಂದ ರಾಜಕೀಯ 'ರಜೆ' ಪಡೆದ ಮಾಜಿ ಕೇಂದ್ರ ಸಚಿವ

ಅಹಮದಾಬಾದ್, ಜೂ. 3 – ಕಾಂಗ್ರೆಸ್ ಹಿರಿಯ ನಾಯಕ ಹಾಗೂ ಮಾಜಿ ಕೇಂದ್ರ ಸಚಿವ ಭರತ್‌ಸಿನ್ಹ ಸೋಳಂಕಿ ಅವರು ಸಕ್ರಿಯ ರಾಜಕಾರಣದಿಂದ ಕೆಲ ತಿಂಗಳು ವಿರಾಮ ಪಡೆಯುವುದಾಗಿ ಪ್ರಕಟಿಸಿದ್ದಾರೆ.

ಕೌಟುಂಬಿಕ ಕಲಹದ ವಿವಾದ ಹಾಗೂ ಕೌಟುಂಬಿಕ ಕಲಹದ ವಿಡಿಯೋ ಒಂದು ಬೆಳಕಿಗೆ ಬಂದ ನಂತರ ಅವರು ಈ ಕ್ರಮ ತೆಗೆದುಕೊಂಡಿದ್ದಾರೆ.

ಕೆಲ ತಿಂಗಳು ರಾಜಕೀಯದಿಂದ ದೂರ ಉಳಿದು ದಲಿತರು, ಬುಡಕಟ್ಟು ಜನರು, ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳ ಜನರನ್ನು ಭೇಟಿ ಮಾಡಲು 'ಸ್ವಯಂ ಪ್ರೇರಿತ' ನಿರ್ಧಾರ ತೆಗೆದುಕೊಂಡಿರುವುದಾಗಿ ಸೋಳಂಕಿ ಹೇಳಿದ್ದಾರೆ. ಸೋಳಂಕಿ ಅವರ ಪತ್ನಿ ಹಾಗೂ ಇನ್ನೋರ್ವ ಮಹಿಳೆ ಸೋಳಂಕಿ ಕುರಿತು ಜಗಳವಾಡುತ್ತಿರುವ ವಿಡಿಯೋ ವೈರಲ್ ಆಗಿತ್ತು. ವಿರಸಿತ ಪತ್ನಿಯಿಂದ ವಿಚ್ಛೇದನ ಪಡೆಯಲು ಈಗಾಗಲೇ ಸೋಳಂಕಿ ಕೋರ್ಟ್ ಮೊರೆ ಹೋಗಿದ್ದಾರೆ.


# ಸಾಧನೆಗೆ ಅಭಿನಂದನೆಗಳು



**ದಿ|| ನಾಗರಾಜಪ್ಪ ಎಸ್.**
**ಶಿಕ್ಷಕರು**



**ಪ್ರಥಮ್ ಹೆಚ್.**
ಇವರು, ಮಹಾರಾಷ್ಟ್ರದ ಔರಂಗಬಾದ್‌ನಲ್ಲಿ ನಡೆದ 35ನೇ ರಾಷ್ಟ್ರೀಯ ರೋಲರ್ ರಿಲೇ, ಸ್ಕೇಟಿಂಗ್ ಪಂದ್ಯಾವಳಿಯಲ್ಲಿ ರಿಲೇ ವಿಭಾಗದಲ್ಲಿ **ದ್ವಿತೀಯ** ಮತ್ತು ಸ್ಪೀಡ್ ವಿಭಾಗದಲ್ಲಿ **ತೃತೀಯ ಸ್ಥಾನ** ಪಡೆದು ನಗರಕ್ಕೆ ಕೀರ್ತಿ ತಂದಿರುತ್ತಾರೆ.

ಶುಭ ಕೋರುವವರು : **ಪುಷ್ಪಮ್ಮ, ದಿ|| ನಾಗರಾಜಪ್ಪ ಎಸ್.**
ದಾವಣಗೆರೆ ಜಿಲ್ಲಾ ಅಮೆಚೂರ್ ಕಬಡ್ಡಿ ಮಾಜಿ ಅಧ್ಯಕ್ಷರು
**ಶ್ರೀಮತಿ ಮೀನಾಕ್ಷಮ್ಮ ಹರ್ಷ ಎಸ್.ಎನ್.**
ಶುಶ್ರೂಷಾಧಿಕಾರಿಗಳು, ಬಾಪೂಜಿ ಮಕ್ಕಳ ಆಸ್ಪತ್ರೆ
**ಶ್ರೀಮತಿ ಆಶಾ ಎಸ್.ಎನ್. ನಾಗರಾಜ್ ಸಿ.**
ಉಪಾನ್ಯಸಕರು, ಸರ್ಕಾರಿ ಪಾಲಿಟೆಕ್ನಿಕ್, ಹರಪನಹಳ್ಳಿ.
**ಪಾವಡಪ್ಪರ ವಂಶಸ್ಥರು, ನಿಟುವಳ್ಳಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು, ಆರ್‌ವಿಕೆ, ಸಿಬಿಎಸ್‌ಸಿ. ಶಾಲಾ ಆಡಳಿತ ಮಂಡಳಿ.**


# ಸ್ವರ್ಣ ಗೆದ್ದ ಮಲ್ಲಿಕಾರ್ಜುನ್‌ಗೆ ಭಾರೀ ಸ್ವಾಗತ

ಹರಪನಹಳ್ಳಿ, ಜೂ. 3- ಥೈಲ್ಯಾಂಡ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದು ಗುರುವಾರ ಸ್ವಗ್ರಾಮ ಹಲುವಾಗಿಲು ಗ್ರಾಮಕ್ಕೆ ಆಗಮಿಸಿದ ಯುವ ಕುಸ್ತಿಪಟು ಮಲ್ಲಿಕಾರ್ಜುನ್ ಅವರನ್ನು ಗ್ರಾಮಕ್ಕೆ ಅದ್ಧೂರಿಯಾಗಿ ಸ್ವಾಗತ ಮಾಡಿಕೊಳ್ಳಲಾಯಿತು.

ಗುರುವಾರ ಮಧ್ಯಾಹ್ನ ಹಲುವಾಗಲು ಗ್ರಾಮಕ್ಕೆ ಆಗಮಿಸಿದ ದನಕಾವರ್ ಮಲ್ಲಿಕಾರ್ಜುನ್ ಅವರನ್ನು ತಂದೆ-ತಾಯಿ ಕುಟುಂಬ ವರ್ಗದವರು ವಿದ್ಯಾರ್ಥಿಗಳು, ಜನಪ್ರತಿನಿಧಿಗಳು, ಯುವಕರು, ಮುಖಂಡರು ಸೇರಿದಂತೆ ಅಪಾರ ಜನಸಂಖ್ಯೆಯೊಂದಿಗೆ ತೆರೆದ ವಾಹನದಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಭವ್ಯ ಸ್ವಾಗತ ಕೋರಲಾಯಿತು.

ಈಚೆಗೆ ಥೈಲ್ಯಾಂಡಿನ ಬ್ಯಾಂಕಾಕ್ ರಾಜ್ಯದಲ್ಲಿ ನಡೆದ ಅಂತರರಾಷ್ಟ್ರೀಯ ಮಟ್ಟದ 70 ಕೆಜಿ ವಿಭಾಗದ ಕುಸ್ತಿ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಮಲ್ಲಿಕಾರ್ಜುನ್ ಜಪಾನ್, ಇಂಡೋನೇಷಿಯಾ, ಥೈಲ್ಯಾಂಡ್, ಅಮೇರಿಕಾ ದೇಶಗಳ ಕುಸ್ತಿ ಪುಟಗಳನ್ನು ಬಗ್ಗು ಬಡಿದು ಚಿನ್ನದ ಪದಕ ಮುಡಿಗೇರಿಸಿಕೊಂಡಿದ್ದರು. ಕುಸ್ತಿ ಸ್ಪರ್ಧೆಯಲ್ಲಿ ಜಯ ಸಾಧಿಸಿ, ಇಡೀ ವಿಶ್ವದ ಗಮನ ಸೆಳೆದಿದ್ದಲ್ಲದೇ ತಾಲ್ಲೂಕಿನ ಕೀರ್ತಿಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳಗಿರುವ ಮಲ್ಲಿಕಾರ್ಜುನ್ ಅವರಿಗೆ ಹರಪನಹಳ್ಳಿ ಕ್ಷೇತ್ರದ ಶಾಸಕ ಜಿ.ಕರುಣಾಕರ ರೆಡ್ಡಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಕಾಂಗ್ರೆಸ್ ಮುಖಂಡ ಎಚ್.ಬಿ.ಪರಶುರಾಮ, ಶಶಿಧರ್ ಪೂಜಾರ್, ಡಾ. ಆರುಂಡಿ ಸುವರ್ಣ ನಾಗರಾಜ್, ಎಂ.ಪಿ.ವೀಣಾ ಮತ್ತಿತರರು ಅಭಿನಂದಿಸಿದ್ದಾರೆ.




**ಚಿನ್ನದ ಪದಕ ಗೆದ್ದಿರುವುದು ತುಂಬಾ ಖುಷಿ ತಂದಿದೆ, ಏಷಿಯನ್ ಗೇಮ್ಸ್‌ನಲ್ಲಿ ಆಡಬೇಕೆಂಬ ಆಸೆ ಇದೆ. ಗ್ರಾಮೀಣ ಪ್ರದೇಶದ ಆಸಕ್ತಿವುಳ್ಳ ಯುವಕರಿಗೆ ಕುಸ್ತಿ ಬಗ್ಗೆ ಮಾರ್ಗದರ್ಶನ ಮಾಡುತ್ತೇನೆ. ಯುವ ಕ್ರೀಡಾಪಟುಗಳಿಗೆ ಸರ್ಕಾರ ಸಹಕಾರ ನೀಡಬೇಕು.**

# ಪಾಕ್‌ಗೆ 2.3 ಶತಕೋಟಿ ಡಾಲರ್ ನೀಡಲು ಚೀನಾ ಬ್ಯಾಂಕುಗಳ ಸಮ್ಮತಿ

ಇಸ್ಲಾಮಾಬಾದ್, ಜೂ. 3 – ಪಾಕಿಸ್ತಾನಕ್ಕೆ 2.3 ಶತಕೋಟಿ ಡಾಲರ್‌ಗಳ ಹಣಕಾಸು ಮರು ಪೂರೈಕೆಗೆ ಚೀನಾದ ಬ್ಯಾಂಕುಗಳು ಸಮ್ಮತಿಸಿವೆ ಎಂದು ಪಾಕಿಸ್ತಾನದ ಹಣಕಾಸು ಸಚಿವ ಮಿಫ್ತಾ ಇಸ್ಮಾಯಿಲ್ ಹೇಳಿದ್ದಾರೆ. ವಿದೇಶಿ ವಿನಿಮಯದ ಕೊರತೆಯಲ್ಲಿರುವ ಪಾಕಿಸ್ತಾನದಕ್ಕೆ, ಈ ಕ್ರಮ ನೆರವಾಗಲಿದೆ.

ಭಾರತ ಹಾಗೂ ಪಾಕಿಸ್ತಾನಗಳ ಕಡೆಯ ಔಪಚಾರಿಕ ಒಪ್ಪಿಗೆಗಳ ನಂತರ ಹಣ ದೊರೆಯಲಿದೆ ಎಂದು ಸಚಿವ ಇಸ್ಮಾಯಿಲ್ ತಿಳಿಸಿದ್ದಾರೆ.

ಪಾಕಿಸ್ತಾನ ಕೇಂದ್ರ ಬ್ಯಾಂಕ್ ಬಳಿ ಈಗ 10.09 ಶತಕೋಟಿ ಡಾಲರ್ ವಿನಿಮಯ ಇದೆ. ಇದು 1.5 ತಿಂಗಳಿಗೆ ಮಾತ್ರ ಸಾಲುತ್ತದೆ ಎಂದು ಪಾಕಿಸ್ತಾನದ ಜಿಯೋ ನ್ಯೂಸ್ ವರದಿ ಮಾಡಿದೆ.

# ವಿಮಾನ ನಿಲ್ದಾಣ

**(1ನೇ ಪುಟದಿಂದ)** ಭಾಗಶಃ ಪ್ರದೇಶದಲ್ಲಿ ಮಣ್ಣಿನ ನಮೂನೆ, ಹೈ ಟೆನ್‌ಶನ್ ವಿದ್ಯುತ್ ಮಾರ್ಗ ಹಾದು ಹೋಗಿರುವುದು, ಭೂಮಿಯ ಸಮತಟ್ಟು ಮುಂತಾದವುಗಳನ್ನು ವೀಕ್ಷಿಸಿದರು.

ನಂತರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಪ್ರಾಧಿಕಾರದ ಅಧಿಕಾರಿಗಳು ಮಾತನಾಡಿ, ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆ ನಡೆಸಿದ್ದು ಸಾಧ್ಯಾಸಾಧ್ಯತೆಗಳ ವರದಿಯನ್ನು 3 ವಾರದೊಳಗಾಗಿ ನೀಡಲಾಗುವುದು ಎಂದು ತಿಳಿಸಿದರು.


# ದಿ ಕರೂರ್ ವೈಶ್ಯ ಬ್ಯಾಂಕ್ ಲಿ.,

KVB
# 6, 2ನೇ ಮಹಡಿ, ವಿಭಾಗೀಯ ಕಛೇರಿ, ವಾಸವಿ ದೇವಸ್ಥಾನದ ರಸ್ತೆ, ಸಜ್ಜನ್‌ರಾವ್ ವೃತ್ತ, ವಿ.ವಿ. ಪುರಂ, ಬೆಂಗಳೂರು. ಶಾಖೆ : ದಾವಣಗೆರೆ. ಫೋನ್ : 08192-277036.

ಈ ಕೆಳಕಂಡವರು ನಮ್ಮ ಬ್ಯಾಂಕಿನಲ್ಲಿ ಚಿನ್ನಾಭರಣಗಳನ್ನು ಇಟ್ಟು ಸಾಲ ತೆಗೆದುಕೊಂಡಿದ್ದು, ಸಾಲ ಸುಸ್ತಿಯಾಗಿರುತ್ತದೆ. ಆ ಕಾರಣ ಚಿನ್ನದ ಆಭರಣಗಳನ್ನು ಶಾಖೆಯ ಕಛೇರಿಯಲ್ಲಿ ದಿನಾಂಕ 16.06.2022 ರ ಮಧ್ಯಾಹ್ನ 4.00 ಗಂಟೆಗೆ ಹರಾಜು ಹಾಕಲಾಗುತ್ತಿದೆ. ಆಸಕ್ತರು ರೂ. 10,000/- ಮುಂಗಡ ಠೇವಣಿ ಕಟ್ಟಿ ಹರಾಜಿನಲ್ಲಿ ಭಾಗವಹಿಸಬಹುದು. ಹರಾಜಾದ ತಕ್ಷಣ ಪೂರ್ತಿ ಹಣ ಪಾವತಿ ಮಾಡತಕ್ಕದ್ದು. ಹರಾಜನ್ನು ಮುಂದೂಡುವ ಅಥವಾ ರದ್ದುಪಡಿಸುವ ಹಕ್ಕನ್ನು ಬ್ಯಾಂಕ್ ಹೊಂದಿರುತ್ತದೆ. ವ್ಯವಸ್ಥಾಪಕರ ತೀರ್ಮಾನವೇ ಅಂತಿಮ ತೀರ್ಮಾನ.

ಹರಾಜಿನಲ್ಲಿ ಭಾಗವಹಿಸಲಿಚ್ಚಿಸುವವರು 12 ಗಂಟೆಯೊಳಗೆ ಹರಾಜು ಟೋಕನ್ ಪಡೆದವರಿಗೆ ಮಾತ್ರ ಆದ್ಯತೆ.

| ಕ್ರ. ಸಂ. | ಲೋನ್ ಖಾತೆ ನಂ. | ಲೋನ್ ತೆಗೆದು ಕೊಂಡ ದಿನಾಂಕ | ಸುಸ್ತಿದಾರರ ಹೆಸರು | ವಿಳಾಸ | ಗ್ರಾಸ್ ತೂಕ ಗ್ರಾಂ ಗಳಲ್ಲಿ |
|---|---|---|---|---|---|
| 1 | 1305958000 000392 | 26-02-2021 | ಮಲ್ಲಿಕಾರ್ಜುನ ಹೆಚ್. | #1044/2, 2ನೇ ಮೇನ್, 2ನೇ ಕ್ರಾಸ್, # 273/4-12, 2ನೇ ಮಹಡಿ, ಶ್ರೀ ಮಲ್ಲಿಕಾರ್ಜುನ ಟವರ್ಸ್, ಪ್ರವಾಸಿ ಮಂದಿರ ರಸ್ತೆ, ದಾವಣಗೆರೆ-577002 | 47.10 |

**ದಿ ಕರೂರ್ ವೈಶ್ಯ ಬ್ಯಾಂಕ್ ಲಿ.,**



# ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ಸಂ:ದಾಮನಪಾ/ನಬನಿಕೋ/7.25/ಸಾಪ್ರ/01/2022–23 ದಿನಾಂಕ:30–05–2022

**ಸಾರ್ವಜನಿಕ ಪ್ರಕಟಣೆ**

2020–21 ನೇ ಸಾಲಿನ ಪಾಲಿಕೆ ಸಾಮಾನ್ಯನಿಧಿ ಹಾಗೂ 2021–22ನೇ ಸಾಲಿನ ಎಸ್.ಫ್.ಸಿ ಅನುದಾನದಲ್ಲಿ ಕಾಯ್ದಿರಿಸಿದ ಶೇ7.25 ರ ಯೋಜನೆಯ ವ್ಯಕ್ತಿ ಸಂಬಂಧಿತ ಕಾರ್ಯಕ್ರಮದಡಿ ಅರ್ಹ ಫಲಾನುಭವಿಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದ್ದು, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅರ್ಹ ಫಲಾನುಭವಿಗಳು ಮಹಾನಗರ ಪಾಲಿಕೆಯ ವೆಬ್‌ಸೈಟ್ **www.davanagerecity.gov.in** ಮೂಲಕ ಅರ್ಜಿ ಪಡೆದು ಎಲ್ಲಾ ದಾಖಲಾತಿಗಳೊಂದಿಗೆ ದಿನಾಂಕ:29–06–2022 ರೊಳಗಾಗಿ ಸಾರ್ವಜನಿಕ ಕುಂದುಕೊರತೆ ವಿಭಾಗ, (ನಗರ ಬಡತನ ನಿವಾರಣ ಕೋಶ ಎಸ್.ಜೆ.ಎಸ್.ಆರ್.ವೈ ಕಟ್ಟಡ) ಮಹಾನಗರ ಪಾಲಿಕೆ, ದಾವಣಗೆರೆ ರವರಿಗೆ ನಿಗಧಿತ ದಾಖಲೆಗಳೊಂದಿಗೆ ಖುದ್ದಾಗಿ ಅರ್ಜಿ ಸಲ್ಲಿಸಲು ಕೋರಲಾಗಿದೆ. ಅಪೂರ್ಣ ಹಾಗೂ ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**ಶೇ7.25ರ ಫಲಾನುಭವಿಗಳಿಗಿರುವ ಕಾರ್ಯಕ್ರಮಗಳು**

| ಕ್ರ.ಸಂ | ಯೋಜನೆಯ ವಿವರ | ಅರ್ಹತೆ | ಒದಗಿಸಬೇಕಾದ ದಾಖಲಾತಿಗಳು |
|---|---|---|---|
| 1 | ಐ.ಎ.ಎಸ್./ಕೆ.ಎ.ಎಸ್. ಬ್ಯಾಂಕಿಂಗ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರ್ವ ತರಬೇತಿ ನೀಡುವುದು | 1)ಅರ್ಜಿದಾರರು ಬಡತನ ರೇಖೆಗಿಂತ ಕೆಳಗಿದ್ದು ವಾರ್ಷಿಕ ವರಮಾನ ರೂ.2,50,000/– ಮೀರಿರಬಾರದು. | 1) ನಿಗದಿತ ನಮೂನೆಯಲ್ಲಿರುವ ಅರ್ಜಿ ಮತ್ತು ಪಾಸ್‌ಪೋರ್ಟ ಅಳತೆಯ 2 ಭಾವಚಿತ್ರಗಳು 2) ಪ್ರಸ್ತುತಸಾಲಿನ ಶಾಲೆ/ಕಾಲೇಜು/ ವಿಶ್ವವಿದ್ಯಾನಿಲಯ ದಿಂದ ವ್ಯಾಸಂಗ ಪ್ರಮಾಣ ಪತ್ರ ಮತ್ತು ಶುಲ್ಕ ಪಾವತಿಸಿದ ರಶೀದಿ ಪತ್ರ 3) ಹಿಂದಿನ ವರ್ಷದ ದೃಢೀಕರಣ ಅಂಕ ಪಟ್ಟಿ 4) ಚಾಲ್ತಿ ಇರುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರ 5) ಪಡಿತರ ಚೀಟಿ/ಚುನಾವಣಾ ಗುರುತಿನ ಚೀಟಿ/ಕಡ್ಡಾಯವಾಗಿ ಆಧಾರ್‌ಕಾರ್ಡ್ ಸಲ್ಲಿಸುವುದು. |
| 2 | ಶಸ್ತ್ರ ಚಿಕಿತ್ಸೆಗೆ ಸಹಾಯಧನ | 1) ಅರ್ಜಿದಾರರು ಬಡತನ ರೇಖೆಗಿಂತ ಕೆಳಗಿದ್ದು, ವಾರ್ಷಿಕ ವರಮಾನ ರೂ. 3,00,000/– ಮೀರತಕ್ಕದ್ದಲ್ಲ. 2) ದಾವಣಗೆರೆ ನಗರದ ಖಾಯಂ ನಿವಾಸಿಯಾಗಿರಬೇಕು 3)ಕಡ್ಡಾಯವಾಗಿ ಫಲಾನುಭವಿಯು ಶಸ್ತ್ರ ಚಿಕಿತ್ಸೆಗೆ ಒಳಗಾಗಿರಬೇಕು 4) ಸರ್ಕಾರದ ಇತರೆ ಇಲಾಖೆಯಿಂದ ಶಸ್ತ್ರ ಚಿಕಿತ್ಸೆಗೆ ಸಹಾಯಧನ ಪಡೆದಿರಬಾರದು. | 1) ಅರ್ಜಿ ಮತ್ತು ಪಾಸ್ ಫೋಟೋ ಅಳತೆಯ 2 ಭಾವಚಿತ್ರ 2) ಚಾಲ್ತಿ ಇರುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರ 3) ಪಡಿತರ ಚೀಟಿ/ ಚುನಾವಣಾ ಗುರುತಿನ ಪತ್ರ/ನಿವಾಸಿ ದೃಢೀಕರಣ ಪತ್ರ 4) ಶಸ್ತ್ರ ಚಿಕಿತ್ಸೆ ಕೈಗೊಂಡಿರುವ ವೈದ್ಯಕೀಯ ಪ್ರಮಾಣ ಪತ್ರ 5) ಶಸ್ತ್ರ ಚಿಕಿತ್ಸೆಗೆ ಸಂಬಂದಿತ ದೃಢೀಕೃತ ಬಿಲ್ಲುಗಳು ಹಾಗೂ ಡಿಸ್ಚಾರ್ಜ್ ಸಮ್ಮರಿ 5) ಅರ್ಜಿದಾರರು ತಮ್ಮ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನ ಖಾತೆಯ ಜೆರಾಕ್ಸ್ ಪ್ರತಿಯನ್ನು ಸಲ್ಲಿಸುವುದು (IFSC ಕೋಡ್ ಸಮೇತ) |

ಷರಾ: ಕ್ರಮ ಸಂಖ್ಯೆ 1 ಮತ್ತು 2 ರ ಶೇ7.25ರ ಯೋಜನೆಯ ಸೌಲಭ್ಯಗಳಿಗೆ ಅರ್ಜಿ ಸಲ್ಲಿಸುವ ಫಲಾನುಭವಿಗಳು ಸಲ್ಲಿಸಬೇಕಾದ ದಾಖಲೆಗಳನ್ನು ದೃಢೀಕರಿಸಿ ಸಲ್ಲಿಸಬೇಕು.

ವಾಸಾಇ/ದಾವಣಗೆರೆ/180/ಎಂಸಿಎ/2022–23 ಸಹಿ/– ಆಯುಕ್ತರು, ಮಹಾನಗರ ಪಾಲಿಕೆ ದಾವಣಗೆರೆ

# ಪಠ್ಯ ಮರು ಪರಿಷ್ಕರಣಾ ಸಮಿತಿ ರದ್ದುಪಡಿಸಲು ಆಗ್ರಹಿಸಿ ಪ್ರತಿಭಟನೆ

ದಾವಣಗೆರೆ, ಜೂ.3- ಪಠ್ಯ ಮರು ಪರಿಷ್ಕರಣಾ ಸಮಿತಿ ರದ್ದುಪಡಿಸಬೇಕು. ತಿದ್ದುಪಡಿ ನಂತರವೇ ಮಕ್ಕಳಿಗೆ ಪಠ್ಯ ವಿತರಿಸಬೇಕೆಂದು ಆಗ್ರಹಿಸಿ ಬಸವ ಪರ ಮತ್ತು ಕನ್ನಡ ಪರ ಸಂಘಟನೆಗಳ ನೇತೃತ್ವದಲ್ಲಿ ನಗರದಲ್ಲಿಂದು ಪ್ರತಿಭಟನೆ ನಡೆಸಲಾಯಿತು.

ಅಂಬೇಡ್ಕರ್ ವೃತ್ತದಿಂದ ಉಪವಿಭಾಗಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಿದ ಸಂಘಟನೆಗಳ ಪದಾಧಿಕಾರಿಗಳು ಉಪವಿಭಾಗಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

9ನೇ ತರಗತಿಯ ಸಮಾಜ ವಿಜ್ಞಾನ ಪಠ್ಯ ಪುಸ್ತಕದಲ್ಲಿ ಅಳವಡಿಸಿದ್ದ ಬಸವಣ್ಣನವರನ್ನು ಕುರಿತ ಒಂದು ಪುಟದ ಕಿರು ಬರಹದಲ್ಲಿ ಅವರ ಚರಿತ್ರೆ ಮತ್ತು ಚಾರಿತ್ರ್ಯಗಳಿಗೆ ಧಕ್ಕೆ ತರುವ ವಿಚಾರಗಳನ್ನು ಸೇರಿಸಲಾಗಿದೆ. ದೋಷ ಪೂರಿತ ಪಠ್ಯ ರಚನೆ ಬಸವ ತತ್ವ ಅನುಯಾಯಿಗಳಿಗೆ ತುಂಬಾ ನೋವುಂಟು ಮಾಡುವಂತಹದ್ದಾಗಿದೆ. ಕೂಡಲೇ ಸಮಿತಿಯನ್ನು ರದ್ದುಪಡಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಈ ಬಗ್ಗೆ ಕೂಲಂಕುಶವಾಗಿ ಚರ್ಚಿಸಿ, ಪಠ್ಯದಲ್ಲಿ ಆಗಿರುವ ತಪ್ಪುಗಳನ್ನು ಸರಿಪಡಿಸಬೇಕು. ಬಸವಣ್ಣನವರ ಪ್ರತಿಯೊಂದು ತತ್ವಗಳನ್ನು ಇಲ್ಲಿ ತಿರುಚಿ ಬರೆಯಲಾಗಿದೆ. ಇದರಿಂದಾಗಿ ವಿಶ್ವಮಾನವ ಬಸವಣ್ಣನವರಿಗೆ ಅಪಚಾರ ಮಾಡಿದಂತಾಗಿದೆ. ಸತ್ಯವನ್ನು ಅರಿಯದ ಪಠ್ಯ ರಚನಾಕಾರರು ಬಸವಣ್ಣನವರ ಆಶಯಕ್ಕೆ ವಿರುದ್ಧವಾಗಿ ಬರೆದಿರುವುದು ಆಕ್ಷೇಪಾರ್ಹ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ, ಅನೀಸ್ ಪಾಷ, ಮಹಾಂತೇಶ್ ಅಗಡಿ, ಶಶಿಧರ ಬಸಾಪುರ, ಕೆ.ಎಲ್. ರಾಘವೇಂದ್ರ, ಎಚ್. ರವೀಂದ್ರ, ವೀಣಾ ಮಂಜುನಾಥ್ ಸೇರಿದಂತೆ, ಇತರರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ಪಂಚಮಸಾಲಿ ಸಮಾಜದ ಸಭೆ

ಇಂದು ಸಂಜೆ 6.30 ಗಂಟೆಗೆ ಜಿಲ್ಲಾ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಕಛೇರಿಯಲ್ಲಿ ಪಂಚಮಸಾಲಿ ಸಮಾಜದ ಜಿಲ್ಲಾ ಯುವ ಘಟಕ ಮತ್ತು ನಗರ ಯುವ ಘಟಕಗಳ ಪುನರ್ ರಚನೆಯ ಪೂರ್ವ ಭಾವಿ ಸಭೆಯನ್ನು ಕರೆಯಲಾಗಿದೆ. ಸಭೆಯ ಅಧ್ಯಕ್ಷತೆಯನ್ನು ಸಮಾಜದ ಜಿಲ್ಲಾ ಅಧ್ಯಕ್ಷ ಬಿ. ಸಿ. ಉಮಾಪತಿ ವಹಿಸುವರು.

# ಆರ್ಥಿಕ ಸುಭದ್ರತೆಗೆ ವಾಣಿಜ್ಯಶಾಸ್ತ್ರದ ಕೊಡುಗೆ ಅಪಾರ

## ಸರ್.ಎಂ.ವಿ. ಪದವಿ ಪೂರ್ವ ಕಾಲೇಜಿನ ಕಾರ್ಯಕ್ರಮದಲ್ಲಿ ಲೆಕ್ಕಪರಿಶೋಧಕ ಡಿ.ಜಿ. ಹರ್ಷ



ದಾವಣಗೆರೆ, ಜೂ. 3- ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ವಾಣಿಜ್ಯ ವಿಭಾಗ ಪ್ರಮುಖ ಪಾತ್ರ ವಹಿಸಲಿದೆ. ದೇಶದ ಆರ್ಥಿಕ ಸುಭದ್ರತೆಗೆ ವಾಣಿಜ್ಯಶಾಸ್ತ್ರದ ಕೊಡುಗೆ ಅಪಾರ ಎಂದು ಲೆಕ್ಕಪರಿಶೋಧಕ ಡಿ.ಜಿ. ಹರ್ಷ ಹೇಳಿದರು.

ನಗರದ ಹೊರ ವಲಯದ ಎಸ್.ಎ. ರವೀಂದ್ರನಾಥ್ ಬಡಾವಣೆಯಲ್ಲಿರುವ ಸರ್. ಎಂ.ವಿ. ಪದವಿ ಪೂರ್ವ ಕಾಲೇಜಿನ ಹೊಸ ಕಟ್ಟಡದ ಸಭಾಂಗಣದಲ್ಲಿ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ 'ಜಾಗತಿಕ ಮಟ್ಟದಲ್ಲಿನ ವಿಫುಲ ಉದ್ಯೋಗ ಅವಕಾಶಗಳು' ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ವಾಣಿಜ್ಯ ಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ಸಾಕಷ್ಟು ಉದ್ಯೋಗಾವಕಾಶಗಳು ಲಭ್ಯವಿದ್ದು, ಸದುಪಯೋಗಪಡಿಸಿಕೊಳ್ಳಬೇಕಾಗಿದೆ. ಸೂಕ್ತ ತರಬೇತಿ ಮತ್ತು ಪ್ರಾಮಾಣಿಕ ಪ್ರಯತ್ನಕ್ಕೆ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದರು.

ಯುಪಿಎಸ್‌ಸಿ ಪರೀಕ್ಷೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದಿರುವ ಅವಿನಾಶ್ ಸನ್ಮಾನ ಸ್ವೀಕರಿಸಿ ಮಾತನಾಡಿ, ನಮ್ಮ ಆಯ್ಕೆಗಳನ್ನು ದೃಢವಾಗಿ, ಸರಿಯಾದ ನಿಟ್ಟಿನಲ್ಲಿ ಕೈಗೊಂಡಾಗ ಮಾತ್ರ ಐಎಎಸ್, ಐಪಿಎಸ್, ಐಎಫ್‌ಎಸ್ ನಂತಹ ಕ್ಷೇತ್ರಗಳನ್ನು ನಮ್ಮದಾಗಿಸಿಕೊಳ್ಳಲು ಸಾಧ್ಯವಿದೆ ಎಂದು ಹೇಳಿದರು.

ವಾಣಿಜ್ಯ ವಿಭಾಗದ ತಿಳಿವಳಿಕೆಯು ಆಡಳಿತಾತ್ಮಕವಾಗಿ ಸಹಕಾರಿಯಾಗಲಿದೆ. ಪಿಯುಸಿ ಹಂತದಿಂದಲೇ ಯುಪಿಎಸ್‌ಸಿ ಮೊದಲಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಯೋಜನೆ ರೂಪಿಸಿಕೊಂಡರೆ ಉತ್ತಮ ಫಲಿತಾಂಶ ಪಡೆಯಬಹುದಾಗಿದೆ ಎಂದರು.

ಸೂಕ್ತ ಸಂದರ್ಭಗಳಲ್ಲಿ ಸೂಕ್ತ ಮಾರ್ಗದರ್ಶನದೊಂದಿಗೆ ಸರಿಯಾದ ನಿರ್ಧಾರ ಕೈಗೊಳ್ಳಬೇಕಾಗಿದೆ ಎಂದು ತಿಳಿಸಿದರು.

ಕಾಲೇಜಿನ ಶೈಕ್ಷಣಿಕ ನಿರ್ದೇಶಕ ಡಾ. ಮುರುಳಿಕೃಷ್ಣ ಮಾತನಾಡಿ, ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಕಾಲೇಜು ಹಂತದಲ್ಲೇ ವಿಶಿಷ್ಟ ಕೌಶಲ್ಯಗಳನ್ನು ರೂಢಿಸಿಕೊಂಡರೆ ಉಳಿದ ಎಲ್ಲಾ ಕ್ಷೇತ್ರಗಳಿಗಿಂತಲೂ ಹೆಚ್ಚಿನ ಸಾಧನೆ ಮಾಡಬಹುದಾಗಿದೆ ಎಂದು ಹಿತ ನುಡಿದರು.

ಕಾಲೇಜಿನ ಕಾರ್ಯದರ್ಶಿ ಎಸ್.ಜೆ. ಶ್ರೀಧರ್ ಮಾತನಾಡಿ, ಅವಿನಾಶ್ ದಾವಣಗೆರೆ ನಗರದ ಸ್ಫೂರ್ತಿಯ ವಿದ್ಯಾರ್ಥಿಯಾಗಿದ್ದು, ಇವರನ್ನು ಆದರ್ಶವಾಗಿಟ್ಟುಕೊಂಡು ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಕಾಲೇಜು ಹೆಚ್ಚಿನ ಅವಕಾಶ ನೀಡಲಿದೆ ಎಂದು ತಿಳಿಸಿದರು.

ಕಾಲೇಜಿನ ಅಧ್ಯಕ್ಷ ಡಾ. ವಿ. ರಾಜೇಂದ್ರ ನಾಯ್ಡು, ಪ್ರಾಚಾರ್ಯ ದೇವರಾಜ್ ಮತ್ತಿತರರು ಉಪಸ್ಥಿತರಿದ್ದರು.

# ತುಮಕೂರಿನ ಸಿದ್ದಲಿಂಗ ಶ್ರೀಗಳಿಂದ ಪೈ ಮಳಿಗೆ ಉದ್ಘಾಟನೆ



ದಾವಣಗೆರೆ, ಜೂ.3- ಪೈ ಇಂಟರ್‌ನ್ಯಾಷನಲ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ವತಿಯಿಂದ ನಗರದಲ್ಲಿ ಪ್ರೀಮಿಯಂ ಎಲೆಕ್ಟ್ರಾನಿಕ್, ಪೀಠೋಪಕರಣಗಳ ಮಳಿಗೆ ಇಂದು ಪ್ರಾರಂಭ ಮಾಡಿದೆ.

ಎವಿಕೆ ಕಾಲೇಜು ರಸ್ತೆಯಲ್ಲಿ ಶುಕ್ರವಾರ ಪೈ ಹೆಸರಿನ ಮಳಿಗೆಯನ್ನು ತುಮಕೂರಿನ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಉದ್ಘಾಟಿಸಿದರು.

ಪೈ ಪ್ರೀಮಿಯಂ ಸ್ಟೋರ್‌ನ ಭರವಸೆಯು ವಿಶ್ವ ದರ್ಜೆಯ ಶಾಪಿಂಗ್ ಅನುಭವ, ವ್ಯಾಪಕವಾದ ವಿವಿಧ ಉತ್ಪನ್ನಗಳನ್ನು ಮತ್ತು ಸಂವಾದಾತ್ಮಕ ಮತ್ತು ಸಹಾಯಕವಾದ ಗ್ರಾಹಕ ಸೇವೆಯೊಂದಿಗೆ ದೃಢವಾದ ಮಾರಾಟದ ನಂತರದ ಸೇವೆ ನೀಡುತ್ತದೆ. ನಾವು ಆ ಭರವಸೆಯನ್ನು ಈಡೇರಿಸುತ್ತಿದ್ದೇವೆ ಎಂಬುದಕ್ಕೆ ದಕ್ಷಿಣ ಭಾರತದಾದ್ಯಂತ ನಮ್ಮ 222 ಮಳಿಗೆಗಳ ಯಶಸ್ಸು ಸಾಕ್ಷಿಯಾಗಿದೆ ಎಂದು ಇಂಟರ್‌ನ್ಯಾಷನಲ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ರಾಜ್‌ಕುಮಾರ್ ಪೈ ತಿಳಿಸಿದರು.

ಪೈ ಅಪ್ಪಟ ಲಕ್ಕಿ ಕೂಪನ್ ಡ್ರಾ ಈವೆಂಟ್ ನಡೆಸಲಾಗುತ್ತದೆ. ಇದನ್ನು ವರ್ಷದಲ್ಲಿ 4 ಬಾರಿ ಪ್ರಾಮಾಣಿಕವಾಗಿ ನಡೆಸಲಾಗುತ್ತದೆ. ಯೂಟ್ಯೂಬ್‌ನಲ್ಲಿಯೂ ನೇರ ಪ್ರಸಾರ ಮಾಡಲಾಗಿದೆ. ಕಳೆದ 22 ವರ್ಷಗಳಲ್ಲಿ ಪೈ ಇಂಟರ್‌ನ್ಯಾಷನಲ್ ತನ್ನ ಗ್ರಾಹಕರಿಗೆ ಬಂಪರ್ ಬಹುಮಾನವಾಗಿ 320 ಕಾರುಗಳು, 320 ಬೈಕ್‌ಗಳನ್ನು ವಿತರಿಸಿದೆ. 64.56 ಕೋಟಿ ಪೈ ಲಾಯಲ್ಟಿ ಪಾಯಿಂಟ್‌ಗಳು, 2.65 ಕೋಟಿ ನಗದು ಬಹುಮಾನ ಮತ್ತು 22.64 ಕೋಟಿ ಉಚಿತ ಶಾಪಿಂಗ್ ಅನ್ನು ಗ್ರಾಹಕರಿಗೆ ಪ್ರಮುಖ ಬಹುಮಾನಗಳಾಗಿ ವಿತರಿಸಲಾಗಿದೆ.

ಇಲ್ಲಿಯವರೆಗೆ 7.32 ಕೋಟಿ ಮೌಲ್ಯದ ಚಿನ್ನದ ನಾಣ್ಯಗಳು ಮತ್ತು ಸಾವಿರಾರು ಎಲ್‌ಸಿಡಿಗಳು, ಎಲ್ ಇ ಡಿ ಗ ಳು, ರೆಫ್ರಿಜರೇಟರ್‌ಗಳು, ವಾಷಿಂಗ್ ಮೆಷಿನ್‌ಗಳು, ಸಿಸಿ ಟಿವಿಗಳು, ಮೈಕ್ರೋವೇವ್ ಓವನ್‌ಗಳು, ಮೊಬೈಲ್ ಫೋನ್‌ಗಳು, ಡಿವಿಡಿ ಪ್ಲೇಯರ್‌ಗಳು, ಇಂಡಕ್ಷನ್ ಕುಕ್ಕರ್‌ಗಳು ಮತ್ತು ಲಕ್ಷಗಟ್ಟಲೆ ಇತರೆ ಸಣ್ಣ ಬಹುಮಾನಗಳನ್ನು ವಿತರಿಸಿದ್ದೇವೆ. ದಾವಣಗೆರೆಯ ಪೈ ಪ್ರೀಮಿಯಂ ಸ್ಟೋರ್‌ನಲ್ಲಿ ಗೃಹ, ಮನರಂಜನೆ, ಸಣ್ಣ ಉಪಕರಣ, ಬಿಳಿ ವಸ್ತುಗಳು, ಲ್ಯಾಪ್‌ಟಾಪ್‌ಗಳು, ಮೊಬೈಲ್, ಪೀಠೋಪಕರ ಣಗಳು ಮತ್ತು ಹೆಚ್ಚಿನವುಗಳಂತಹ ವಿಭಾಗಗಳೊಂದಿಗೆ ಮಳಿಗೆ ಪ್ರಾರಂಭ ಮಾಡಲಾಗಿದೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಪೈ ಇಂಟರ್‌ನ್ಯಾಷನಲ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಎಸ್. ರಾಜ್‌ಕುಮಾರ್ ಪೈ, ನಿರ್ಮಲಾ ಪೈ ಸೇರಿದಂತೆ ಇತರರು ಇದ್ದರು.

## ನಗರದಲ್ಲಿ ಇಂದಿನಿಂದ ನಿರಂತರ ಚೆಸ್ ತರಬೇತಿ



ಶಾಮನೂರು ಶಿವಶಂಕರಪ್ಪ ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ಇಂದಿನಿಂದ ನಿರಂತರ ತರಬೇತಿ ಶಿಬಿರವನ್ನು ಆರಂಭಿಸಲಾಗುತ್ತಿದೆ ಎಂದು ದಾವಣಗೆರೆ ಚೆಸ್ ಕ್ಲಬ್ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

ಮಕ್ಕಳಿಗೆ ಪ್ರತಿ ಶನಿವಾರ 2 ರಿಂದ 5 ರವರೆಗೆ ಮತ್ತು ಭಾನುವಾರ 10 ರಿಂದ 1 ರವರೆಗೆ ತರಬೇತಿಯನ್ನು ನೀಡಲಾಗುವುದು.

ಶಿಬಿರದಲ್ಲಿ ಮಕ್ಕಳಿಗೆ ಬೇಸಿಕ್ ಇಂಟರ್ ಮೀಡಿಯೆಟ್ ಅಡ್ವಾನ್ಸ್ 3 ವಿಧಗಳಲ್ಲಿ ಕ್ಲಾಸ್ ನಡೆಸಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಘದ ಕಾರ್ಯದರ್ಶಿ ಯುವರಾಜ್ (9945613469), ಮಂಜುಳಾ (7259310197) ಅವರನ್ನು ಸಂಪರ್ಕಿಸಬಹುದು.

## ನಗರದ ಬಿಐಇಟಿಯಲ್ಲಿ ಪದವೀಧರ ದಿನಾಚರಣೆ

ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಮತ್ತು ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಅಂಡ್ ರಿಸರ್ಚ್ ಆಶ್ರಯದಲ್ಲಿ ಇಂದು ಸಂಜೆ 4 ಗಂಟೆಗೆ ಇನ್‌ಸ್ಟಿಟ್ಯೂಟ್ ಸಭಾಂಗಣದಲ್ಲಿ ಪದವೀಧರ ದಿನಾಚರಣೆ ಹಮ್ಮಿಕೊಳ್ಳಲಾಗಿದೆ.

ಅಧ್ಯಕ್ಷತೆಯನ್ನು ಅಥಣಿ ಎಸ್. ವೀರಣ್ಣ ವಹಿಸುವರು. ನಿವೇದನ್ ನೆಂಪಲ್ ಗ್ರಾಜ್ಯುಯೇಷನ್ ದಿನದ ಬಗ್ಗೆ ವಿವರಿಸುವರು. ಗೌರವಾನ್ವಿತ ಅತಿಥಿಗಳಾಗಿ ಡಾ. ಹೆಚ್.ಬಿ. ಅರವಿಂದ್ ಮತ್ತು ಡಾ. ಸ್ವಾಮಿ ತ್ರಿಭುವಾನಂದ ಹೆಚ್.ವಿ. ಆಗಮಿಸುವರು.

## ಅಳಿಸುವ ಶಕ್ತಿಯೇ ಗುರು

(3ನೇ ಪುಟದಿಂದ) ಕನಿಷ್ಟ ಪ್ರಜ್ಞೆ ಇದ್ದರೆ ಅವರು ವಿಶ್ವಮಾನವರಾಗುತ್ತಾರೆ ಎಂದು ನುಡಿದರು.

ಇದೇ ಸಂದರ್ಭದಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ 31ನೇ ರ್‍ಯಾಂಕ್ ಪಡೆದ ಅವಿನಾಶ್ ರಾವ್ ಅವರನ್ನು ಸನ್ಮಾನಿಸಲಾಯಿತು.

ಡಾ.ರುದ್ರಮುನಿ ಹಿರೇಮಠ ಉಪನ್ಯಾಸ ನೀಡಿದರು. ಟಿ.ಎಂ. ಚಂದ್ರಶೇಖರ್, ಶ್ರೀಮತಿ ಸುಶೀಲಮ್ಮ ಡಾ.ಜಯಣ್ಣ ಕಂಚಿಕೆರೆ ಉಪಸ್ಥಿತರಿದ್ದರು. ಭವನೇಶ್ವರಿ ನಾಟ್ಯ ಕಲಾ ಸಂಘದವರು ಸುರಪುರದ ವೀರ ವನಿತೆ ನಾಟಕ ಪ್ರದರ್ಶಿಸಿದರು. ಬಸವ ಕಲಾಲೋಕದವರು ಸುಗಮ ಸಂಗೀತ ನಡೆಸಿಕೊಟ್ಟರು.

## ನೀಲಮ್ಮ, ಶಿಂಗ್ರಿಹಳ್ಳಿ ಗ್ರಾ.ಪಂ. ಅಧ್ಯಕ್ಷೆ



ಹರಪನಹಳ್ಳಿ, ಜೂ. 3- ತಾಲ್ಲೂಕಿನ ಶಿಂಗ್ರಿಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ನೀಲಮ್ಮ ಮಲ್ಲಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶಾರದಾಬಾಯಿ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ನೀಲಮ್ಮ ಮಲ್ಲಪ್ಪ ಒಬ್ಬರೇ ನಾಮಪತ್ರ ಸಲ್ಲಿಸಿರುವುದರಿಂದ ಅವಿರೋಧವಾಗಿ ಆಯ್ಕೆ ಮಾಡಲಾಯಿತೆಂದು ಚುನಾವಣಾಧಿಕಾರಿ ತಹಸೀಲ್ದಾರ್ ಶಿವಕುಮಾರ್ ಬಿರಾದಾರ್ ಘೋಷಣೆ ಮಾಡಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ನೀಲಮ್ಮ ಮಲ್ಲಪ್ಪ ಹಾಗೂ ಉಪಾಧ್ಯಕ್ಷರಾದ ಎಸ್. ಎನ್. ಮಂಜುನಾಥ್ ಇವರಿಗೆ ಮುಖಂಡರಾದ ವೈ.ಡಿ. ಅಣ್ಣಪ್ಪ, ತಳವಾರ ಶೇಖರಪ್ಪ, ಟಿ. ನಾಗರಾಜಪ್ಪ, ಶೇಷಾದ್ರಿ, ಉಪ್ಪಾರ ರಾಜಪ್ಪ, ಅಶೋಕ್, ಪರುಸಪ್ಪ, ಮಲ್ಲೇಶಪ್ಪ, ಗ್ರಾಮ ಪಂಚಾಯಿತಿ ಸದಸ್ಯರು, ಸುತ್ತಮುತ್ತಲಿನ ಬಿಜೆಪಿ ಮುಖಂಡರು, ಪಿಡಿಒ ಡಿ. ಭೀಮನಾಯ್ಕ್ ಸನ್ಮಾನಿಸಿದರು.

## ನಾಳೆ ಕೋಟಿ ವೃಕ್ಷ ಆಂದೋಲನ

(1ನೇ ಪುಟದಿಂದ) ಕಾಳಜಿಯನ್ನು ವ್ಯಕ್ತಪಡಿಸಬೇಕು. ಸಸಿಗಳನ್ನು ಬರಿ ನೆಡುವುದಷ್ಟೇ ಅಲ್ಲ, ಅವುಗಳನ್ನು ಪೋಷಿಸಬೇಕು ಎಂದು ಸಚಿವರು ಮನವಿ ಮಾಡಿದ್ದಾರೆ.

## ಜೈನ್ ಕಾಲೇಜಿನಲ್ಲಿ ಸಮ್ಮೇಳನ



ದಾವಣಗೆರೆ, ಜೂ. 3- ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿನಲ್ಲಿ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ರವರ ಸಹಯೋಗದೊಂದಿಗೆ 'ಇಂಟರ್ ನ್ಯಾಷನಲ್ ಕಾನ್ಫರೆನ್ಸ್ ಆನ್ ಇಂಜಿನಿಯರಿಂಗ್ ಇನ್ನೊವೇಷನ್-2022' ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಜೋರ್ಡಾನ್ ವಿಶ್ವವಿದ್ಯಾಲಯದ ಡಾ. ಷಾದಿ ಅಲ್ಜಾವರ್ ಮತ್ತು ಇಸ್ರೋದ ವಿಜ್ಞಾನಿ ರಾಹುಲ್ ಮಿಶ್ರಾ ಭಾಗವಹಿಸಿದ್ದರು. ಗೌರವ ಅತಿಥಿಗಳಾಗಿ ಮೈಸೂರಿನ ಜಿಎಸ್‌ಎಸ್‌ಐಇಟಿಡಬ್ಲ್ಯು ಪ್ರಾಧ್ಯಾಪಕ ಡಾ. ಬಿ.ಡಿ. ಪರಮೇಶಚಾರಿ, ಬೆಂಗಳೂರು ಟಿಐಇ ಅಧ್ಯಕ್ಷರಾದ ಡಾ. ಕೆ.ಎಲ್. ಹೇಮಲತಾ, ಬೆಳಗಾವಿ ಜೈನ್ ಕಾಲೇಜ್ ಆಫ್ ಇಂಜಿನಿಯರಿಂಗ್‌ನ ಪ್ರಾಂಶುಪಾಲ ಡಾ.ಜೆ. ಶಿವಕುಮಾರ್ ಉಪಸ್ಥಿತರಿದ್ದರು.

ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಪ್ರಾಂಶುಪಾಲ ಡಾ. ಡಿ.ಬಿ. ಗಣೇಶ್, ಸಮ್ಮೇಳನದ ಸಂಯೋಜಕರಾಗಿ ವಿದ್ಯುತ್ ವಿಭಾಗದ ಪ್ರೊ. ಹೆಚ್.ಬಿ. ಮರುಳಸಿದ್ದಪ್ಪ, ಪ್ರೊ. ಪ್ರವೀಣ ಅಣಜಿ ಉಪಸ್ಥಿತರಿದ್ದರು.

## ಕೆಪಿಸಿಸಿ ಮಾಯಕೊಂಡ ಬ್ಲಾಕ್ ಸದಸ್ಯ ಸ್ಥಾನಕ್ಕೆ ಅಣಜಿ ಅಂಜಿನಪ್ಪ ರಾಜೀನಾಮೆ



ದಾವಣಗೆರೆ, ಜೂ. 2- ಮಾಯಕೊಂಡ ಬ್ಲಾಕ್ ಕೆಪಿಸಿಸಿ ಸದಸ್ಯ ಸ್ಥಾನ ಹಾಗೂ ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುವುದಾಗಿ ಮಾಯಕೊಂಡ ಬ್ಲಾಕ್ ಕೆಪಿಸಿಸಿ ಸದಸ್ಯ ಅಣಜಿ ಅಂಜಿನಪ್ಪ ತಿಳಿಸಿದ್ದಾರೆ.

ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 16 ಬ್ಲಾಕ್‌ಗಳಿದ್ದು, ಯಾವೊಂದು ಬ್ಲಾಕಿಗೂ ವಾಲ್ಮೀಕಿ-ನಾಯಕ ಸಮುದಾಯದವರನ್ನು ಅಧ್ಯಕ್ಷರನ್ನಾಗಿ ನೇಮಿಸಿರುವುದಿಲ್ಲ. 1997ರಿಂದ ವಾಲ್ಮೀಕಿ-ನಾಯಕ ಸಮುದಾಯದವರನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಸಾಮಾಜಿಕ ನ್ಯಾಯ ಸಿಗುತ್ತಿಲ್ಲ ಎಂದು ಅವರು ಹೇಳಿದ್ದಾರೆ.

## ಪ್ರಿಯಾಂಕ ಗಾಂಧಿಗೆ ಕೊರೊನಾ



ನವದೆಹಲಿ, ಜೂ. 3 – ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ವಾದ್ರ ಅವರಿಗೆ ಕೊರೊನಾ ಸೋಂಕು ಬಂದಿದ್ದು, ಸ್ವಯಂ ಕ್ವಾರಂಟೈನ್ ಆಗಿದ್ದಾರೆ. ಇದಕ್ಕೂ ಮುಂಚೆ ಅವರ ತಾಯಿ ಹಾಗೂ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಲ್ಲಿ ಕೊರೊನಾ ಪಾಸಿಟಿವ್ ಕಂಡು ಬಂದಿತ್ತು. ಕೊರೊನಾ ಸೋಂಕಿನ ಲಘು ಲಕ್ಷಣಗಳು ಕಂಡು ಬಂದಿವೆ. ಟೆಸ್ಟ್‌ನಲ್ಲಿ ಪಾಸಿಟಿವ್ ಬಂದಿದೆ. ಶಿಷ್ಟಾಚಾರಗಳ ಪ್ರಕಾರ ಮನೆಯಲ್ಲಿ ಸ್ವಯಂ ಕ್ವಾರಂಟೈನ್ ಆಗಿದ್ದೇನೆ ಎಂದು ಪ್ರಿಯಾಂಕಾ ಗಾಂಧಿ ಹೇಳಿದ್ದಾರೆ.

# ನಾಳೆ : ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪದಾಧಿಕಾರಿಗಳ ಸೇವಾ ಸ್ವೀಕಾರ ಸಮಾರಂಭ






ದಾವಣಗೆರೆ, ಜೂ.2- ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕಕ್ಕೆ ಆಯ್ಕೆಯಾದ ಇ.ಎಂ. ಮಂಜುನಾಥ ಮತ್ತು ಅವರ ತಂಡದ ನೂತನ ಪದಾಧಿಕಾರಿಗಳ ಸೇವಾ ಸ್ವೀಕಾರ ಸಮಾರಂಭವು ಇದೇ ಜೂ.5ರ ಭಾನುವಾರ ಬೆಳಿಗ್ಗೆ 10.30ಕ್ಕೆ ಬಿಐಇಟಿ ಕಾಲೇಜು ಆವರಣದಲ್ಲಿರುವ ಎಸ್.ಎಸ್ ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ನಡೆಯಲಿದೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸ್ವಾಗತ ಸಮಿತಿ ಅಧ್ಯಕ್ಷ ಆರ್.ರವಿ, ಕಾರ್ಯಕ್ರಮದ ಸಾನ್ನಿಧ್ಯವನ್ನು ಶ್ರೀ ತರಳಬಾಳು ಬೃಹನ್ಮಠದ ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ವಹಿಸುವರು. ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ಬ್ರಹ್ಮಾಕುಮಾರಿ ಲೀಲಾಜಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದರು.

ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಎಸ್ಪಿ ಸಿ.ಬಿ. ರಿಷ್ಯಂತ್ ನೂತನ ಪದಾಧಿಕಾರಿಗಳಿಗೆ ಪ್ರಮಾಣ ಪತ್ರ ವಿತರಿಸಲಿದ್ದಾರೆ. ಜನತಾವಾಣಿ ಸಂಪಾದಕ ಎಂ.ಎಸ್. ವಿಕಾಸ್ ಅವರು ದಿ. ಶ್ರೀ ಡಿ.ವಿ. ಗುಂಡಪ್ಪ, ದಿ. ಶ್ರೀ ಹೆಚ್. ಎನ್. ಷಡಾಕ್ಷರಪ್ಪ, ದಿ. ಶ್ರೀ ಸಿ.ಕೇಶವಮೂರ್ತಿ ಇವರ ಭಾವಚಿತ್ರಗಳಿಗೆ ಪುಷ್ಪ ನಮನ ಅರ್ಪಿಸಲಿದ್ದಾರೆ. ಕಾನಿಪ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್ ಪ್ರತಿಜ್ಞಾ ವಿಧಿ ಬೋಧಿಸಲಿದ್ದಾರೆ. ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯ ಕೆ.ಚಂದ್ರಣ್ಣ ಹಿರಿಯ ಪತ್ರಕರ್ತರಿಗೆ ಗೌರವ ಸಮರ್ಪಣೆ ಸಲ್ಲಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಡಿ.ಅಶೋಕ್ ಕುಮಾರ್, ಸಹಾಯಕ ನಿರ್ದೇಶಕ ಬಿ.ಧನಂಜಯಪ್ಪ, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ.ಏಕಾಂತಪ್ಪ, ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ, ನಗರವಾಣಿ ಸಹ ಸಂಪಾದಕ ಬಿ.ಎನ್. ಮಲ್ಲೇಶ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಚುನಾವಣಾಧಿಕಾರಿ ಎಂ.ಎಸ್. ಶಿವಶರಣಪ್ಪ, ಉಪ ಚುನಾವಣಾಧಿಕಾರಿ ಎ.ಆರ್. ಉಜ್ಜನಪ್ಪ, ಸಹಾಯಕ ಚುನಾವಣಾಧಿಕಾರಿ ಸಿ.ಗಿರೀಶ್ ಅವರುಗಳಿಗೆ ಗೌರವ ಸತ್ಕಾರ ನಡೆಯಲಿದೆ.

ಸಂಘದ ನೂತನ ಜಿಲ್ಲಾಧ್ಯಕ್ಷ ಮಂಜುನಾಥ ಏಕಬೋಟೆ ಮಾತನಾಡಿ, ಕಾರ್ಯ ಕ್ರಮದಲ್ಲಿ 70 ವರ್ಷ ಮೇಲ್ಪಟ್ಟ ತಾಲ್ಲೂಕು ಹಾಗೂ ಜಿಲ್ಲಾ ಪತ್ರಕ ರ್ತರನ್ನು ಹಾಗೂ ಯುಪಿಎಸ್‌ಸಿ ಪರೀಕ್ಷೆಯಲ್ಲಿ 31ನೇ ರ್‍ಯಾಂಕ್ ಪಡೆದು ರಾಜ್ಯಕ್ಕೇ ಪ್ರಥಮರಾದ ಅವಿನಾಶ್ ರಾವ್ ಅವರನ್ನು ಸನ್ಮಾನಿಸಲಾಗುವುದು ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ದಾವಣಗೆರೆಯಲ್ಲಿ ರಾಜ್ಯ ಮಟ್ಟದ ಪತ್ರಕರ್ತರ ಸಮ್ಮೇಳನ ನಡೆಸಲು ಚಿಂತನೆ ನಡೆಸಲಾಗಿದೆ. ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಯುವ ಪತ್ರಕರ್ತರಿಗೆ ಕಾನೂನು ಕಾರ್ಯಾಗಾರ ಏರ್ಪಡಿಸುವುದು ಸೇರಿದಂತೆ ಪ್ರತಿ ತಿಂಗಳು ಒಂದೊಂದು ಕಾರ್ಯಕ್ರಮಗಳನ್ನು ನಡೆಸಲು ಉದ್ದೇಶಿಸಲಾಗಿದೆ ಎಂದರು.

ಸಂಘದ ಕಚೇರಿಗಾಗಿ ನಿವೇಶನ ಗುರುತಿಸಿ ಕಟ್ಟಡ ನಿರ್ಮಾಣಕ್ಕೆ ಬರುವ ಆಗಸ್ಟ್ 15ರಂದು ಭೂಮಿ ಪೂಜೆ ಮಾಡುವ ಗುರಿ ಹೊಂದಲಾಗಿದೆ ಎಂದು ಮಂಜುನಾಥ ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕಾನಿಪ ಸಂಘದ ಪ್ರಧಾನ ಕಾರ್ಯದರ್ಶಿ ಎ.ಫಕೃದ್ದೀನ್, ಖಜಾಂಚಿ ಎನ್.ವಿ. ಬದರಿನಾಥ್, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಚಂದ್ರಣ್ಣ, ಉಪಾಧ್ಯಕ್ಷ ಆರ್. ಎಸ್. ತಿಪ್ಪೇಸ್ವಾಮಿ, ಸದಸ್ಯರಾದ ಸಿ.ವೇದಮೂರ್ತಿ, ಎನ್.ಎಂ. ಇಂದುಶೇಖರ್ ನಿಶಾನಿಮಠ, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ.ಏಕಾಂತಪ್ಪ ಉಪಸ್ಥಿತರಿದ್ದರು.

# ಸ್ಮಾರ್ಟ್ ಸಿಟಿಯಾದರೂ ತೆರಿಗೆಗೆ ಚೀಟಿ ವ್ಯವಸ್ಥೆ

## ಪಾಲಿಕೆಗೆ ತೆರಿಗೆ ಪಾವತಿಸುವುದು ಆನ್‌ಲೈನ್ ಆಗುವುದು ಯಾವಾಗ?

ಓದುಗರ ಪತ್ರ

**ಮಾನ್ಯರೇ,**

ಇತ್ತೀಚಿನ ವರ್ಷಗಳಲ್ಲಿ ನಾಗರಿಕ ಸೇವೆಗಳಿಗೆ ಶುಲ್ಕ ಪಾವತಿಸುವುದಕ್ಕೆ ಆನ್‌ಲೈನ್ ವ್ಯವಸ್ಥೆ ಕಲ್ಪಿಸುವುದು ಸರ್ವೇ ಸಾಮಾನ್ಯವಾಗಿದೆ. ಆನ್‌ಲೈನ್ ಪಾವತಿಯಲ್ಲಿ ವಿಶ್ವದಲ್ಲಿ ಭಾರತ ಮುಂಚೂಣಿ ದೇಶವಾಗಿದೆ. ಆದರೆ, ನಗರಪಾಲಿಕೆ ಮಾತ್ರ ಆನ್‌ಲೈನ್ ಆಸ್ತಿ ತೆರಿಗೆ ಪಾವತಿ ವ್ಯವಸ್ಥೆಗೆ ಮುಂದಾಗದೇ ಇರುವುದು ಆಶ್ಚರ್ಯ. ಡಿಜಿಟಲೀಕರಣದ ಈ ಯುಗದಲ್ಲೂ ಸಹ ಆಸ್ತಿ ತೆರಿಗೆ ಪಾವತಿ ಮಾಡಬೇಕಾದರೆ ಸರದಿಯಲ್ಲಿ ನಿಂತು ಚಲನ್ ತುಂಬಬೇಕಿದೆ. ಚಲನ್‌ಗಳ ಪ್ರಿಂಟೌಟ್ ಪಡೆದು ಹಣ ಪಾವತಿಸಲು ಹೋದಾಗ, ಆನ್‌ಲೈನ್ ಪಾವತಿ ಒತ್ತಟ್ಟಿಗಿರಲಿ ಡೆಬಿಟ್ ಕಾರ್ಡ್ ಸಹ ಪಡೆಯಲು ವ್ಯವಸ್ಥೆ ಇರುವುದಿಲ್ಲ!

ಈಗಲೂ 'ಕ್ಯಾಶ್ ಈಸ್ ಕಿಂಗ್' ಎನ್ನುತ್ತಾ ನಗದು ಪಾವತಿ ವ್ಯವಸ್ಥೆಯಲ್ಲೇ ಪಾಲಿಕೆ ಮುಂದುವರೆದಿದೆ. ಸಣ್ಣ ಪುಟ್ಟ ಡಬ್ಬಾ ಅಂಗಡಿಗಳೂ ಸಹ ಕ್ಯೂ.ಆರ್. ಕೋಡ್ ಬಳಸಿ ಆನ್‌ಲೈನ್ ಪಾವತಿ ವ್ಯವಸ್ಥೆ ಹೊಂದಿವೆ. ಆದರೆ, ಪಾಲಿಕೆ ಮಾತ್ರ ಇನ್ನೂ ಗಾಂಧಿ ತಾತನ ಚಿತ್ರ ಇರುವ ನೋಟುಗಳೇ ಬೇಕೆನ್ನುವ ಕಾಲದಲ್ಲಿದೆ.

ಸ್ಮಾರ್ಟ್ ಸಿಟಿ ಆಗುವಲ್ಲಿ ಮೊದಲ ಹೆಜ್ಜೆಗಳಲ್ಲಿ ಆಸ್ತಿ ತೆರಿಗೆಯನ್ನು ಆನ್‌ಲೈನ್ ಮೂಲಕ ಪಾವತಿಸುವುದು ಆಗಬೇಕಿತ್ತು. ಇತರೆ ಕೆಲ ನಗರಗಳಲ್ಲಿ ಈಗಾಗಲೇ ಆನ್‌ಲೈನ್ ಆಸ್ತಿ ತೆರಿಗೆ ಪದ್ಧತಿ ಜಾರಿಗೆ ಬಂದಿದೆ.

ದಾವಣಗೆರೆ ನಗರ ಪಾಲಿಕೆಗೆ ಕೋಟ್ಯಂತರ ಆದಾಯ ತರುವ ಆಸ್ತಿ ತೆರಿಗೆ ಪಾವತಿಸಿಕೊಳ್ಳುವ ವ್ಯವಸ್ಥೆ ಮೊದಲು ಸುಧಾರಣೆ ಕಾಣಬೇಕಿದೆ. ಗ್ರಾಹಕನೇ ದೊರೆ ಎನ್ನುವ ಮೂಲ ಸಿದ್ಧಾಂತದ ಬದಲು, ಹಣ ಕೊಡುವವರನ್ನು ಸರದಿಯಲ್ಲಿ ನಿಲ್ಲಿಸುವ ಪದ್ಧತಿಗೆ ವಿದಾಯ ಹೇಳಬೇಕಿದೆ. ಕೆಲವೊಮ್ಮೆ ರಶ್ ಹೆಚ್ಚಾಗಿದ್ದಾಗ ತೆರಿಗೆ ಪಾವತಿಸಲು ಗಂಟೆಗಟ್ಟಲೆ ಸರದಿಯಲ್ಲಿ ನಿಲ್ಲಬೇಕಾಗುತ್ತದೆ. ಇದಾವ ರೀತಿಯ ಜನಸ್ನೇಹಿ ವ್ಯವಸ್ಥೆಯೋ ಗೊತ್ತಿಲ್ಲ.

ಸ್ಮಾರ್ಟ್ ಸಿಟಿಯಲ್ಲಿ ಕಚೇರಿಗಳಿಗೆ ಅಲೆದಾಟ ಕಡಿಮೆ ಮಾಡಬೇಕಿದೆ. ಅದರಲ್ಲೂ ಆದಾಯ ಕೊಡುವವರನ್ನು ಅಲೆದಾಡಿಸುವುದನ್ನು ಮೊದಲು ಕೈ ಬಿಡಬೇಕಿದೆ. ಜನಸಾಮಾನ್ಯರು ಕುಳಿತಲ್ಲಿಯೇ ತೆರಿಗೆ ಪಾವತಿಸುವ ವ್ಯವಸ್ಥೆ ಜಾರಿಗೆ ತಂದರೆ ಪಾಲಿಕೆ ಗೌರವ ಹೆಚ್ಚಾಗಲಿದೆ.

**- ಜಿ.ಎನ್. ಕಾಮತ್**, ದಾವಣಗೆರೆ.


## ಅಭಿನಂದನೆಗಳು



ಸಬ್ ಇನ್‌ಸ್ಪೆಕ್ಟರ್ ಆಗಿ ಮುಬಂಡ್ತಿ ಹೊಂದಿರುವ ದಾವಣಗೆರೆ ಪೊಲೀಸ್ ಇಲಾಖೆಯ

**ಶ್ರೀ ಜೈಪ್ರಕಾಶ್** (ಜೆ.ಪಿ)

ಅವರಿಗೆ ಹಾರ್ದಿಕ ಅಭಿನಂದನೆಗಳು.

**ಜೆ.ಈಶ್ವರ್‌ಸಿಂಗ್ ಕವಿತಾಳ, ಮಾಲೀಕರು, ಬಿಂದಾಸ್ ಗ್ರೂಪ್ಸ್**

**ಕುಂದುವಾಡ ಕೆರೆ ವಾಯುವಿಹಾರ ಬಳಗ ಮತ್ತು ಹಿತೈಷಿಗಳು, ಸ್ನೇಹಿತರು, ದಾವಣಗೆರೆ.**

## ಕ್ವೆಸ್ಟ್ ಸ್ಪೀಚ್ ಮತ್ತು ಹಿಯರಿಂಗ್ ಸೆಂಟರ್

3ನೇ ಮೇನ್, ಪಿ.ಜೆ.ಬಡಾವಣೆ, ದಾವಣಗೆರೆ-2

**ಉಚಿತ ಶ್ರವಣ ತಪಾಸಣೆ ಮತ್ತು ಮೌಲ್ಯಮಾಪನ ಶಿಬಿರ**

ಇಂದು (04-06-2022) ಕಿವಿಯ ಶ್ರವಣ ಸಾಧನಗಳ, ear back (ಹಿಂದೆ) ಕಿವಿಯಲ್ಲಿ (in the canal ITC) – ಪ್ರೋಗ್ರಾಮಬಲ್ ಮಾಡಬಹುದಾದ ಶ್ರವಣ ಯಂತ್ರಗಳಿಗಾಗಿ ಉಚಿತ ಶ್ರವಣ ತಪಾಸಣೆ ಮತ್ತು ಮೌಲ್ಯಮಾಪನ ಶಿಬಿರಕ್ಕಾಗಿ ನಿಮ್ಮನ್ನು ಆತ್ಮೀಯವಾಗಿ ಸ್ವಾಗತಿಸುತ್ತದೆ.

ಸಿಂಟ್ರಾನ್ ಎಲೆಕ್ಟ್ರಾನಿಕ್ಸ್‌ನಿಂದ **ಡಾ. ಸ್ಯಾಮ್ಯುಯೆಲ್ ಸಂತೋಷ್, ಶ್ರವಣ ಶಾಸ್ತ್ರಜ್ಞರು** ಶ್ರವಣದೋಷ ಪರೀಕ್ಷೆಯನ್ನು ಮಾಡುತ್ತಾರೆ.

ನಿಮ್ಮ ಅಪಾಯಿಂಟ್‌ಮೆಂಟ್ ಅನ್ನು ತಕ್ಷಣವೇ ಕಾಯ್ದಿರಿಸಿ. ರಿಯಾಯಿತಿ ದರದಲ್ಲಿ ಪಡೆದುಕೊಳ್ಳಿ ಮತ್ತು ನಿಮ್ಮ ಹತ್ತಿರ ಮತ್ತು ಪ್ರಿಯರನ್ನು ಮತ್ತೊಮ್ಮೆ ಕೇಳಿ ಆನಂದಿಸಿ.

**9743780492ಗೆ ಕರೆ ಮಾಡಿ**

# ಹರಪನಹಳ್ಳಿ : ಭಾರೀ ಮಳೆಗೆ ತೇಲಿ ಹೋದ 50 ಚೀಲ ಭತ್ತ

ಹರಪನಹಳ್ಳಿ, ಜೂ.3- ಭಾರೀ ಮಳೆ ಸುರಿದು ಗುಡ್ಡದಿಂದ ನೀರು ರಭಸವಾಗಿ ಹರಿದು, ಕಣದಲ್ಲಿ ಹಾಕಿದ್ದ ಅಂದಾಜು 50 ಭತ್ತದ ಚೀಲಗಳು ಹಳ್ಳದಲ್ಲಿ ತೇಲಿ ಹೋಗಿ ತುಂಗಭದ್ರಾ ನದಿ ಸೇರಿದ ಘಟನೆ ತಾಲ್ಲೂಕಿನ ಗರ್ಭಗುಡಿ ಬಳಿ ನಡೆದಿದೆ.



ಈ ಕುರಿತು ಮಾಹಿತಿ ನೀಡಿದ ತಹಶೀಲ್ದಾರ್ ಡಾ. ಶಿವಕುಮಾರ ಬಿರಾದಾರ ಅವರು, ಗರ್ಭಗುಡಿ ಗ್ರಾಮದ ಬಿಳಿಚೋಡು ನಿಂಗಪ್ಪ, ಹನುಮಂತಪ್ಪ ದೊಡ್ಡಮನಿ, ದೊಡ್ಡಮನಿ ಪಾತಪ್ಪ, ಬಾರ್ಕಿ ಗಂಗಮ್ಮ, ದೊಡ್ಡಮನಿ ದುರುಗಪ್ಪ, ನಾಗರಾಜಪ್ಪ, ದೊಡ್ಡಮನಿ ಕರಿಯಪ್ಪ ಹಾಗೂ ರುದ್ರಪ್ಪರ ಕೆಂಚಪ್ಪ ಹೀಗೆ 8 ಜನ ರೈತರ ಭತ್ತ ಹಳ್ಳದಲ್ಲಿ ತೇಲಿ ಹೋಗಿದೆ. ಘಟನಾ ಸ್ಥಳಕ್ಕೆ ಕಂದಾಯ ಅಧಿಕಾರಿ ಡಿ.ರಾಜಪ್ಪ ಭೇಟಿ ನೀಡಿ, ಪರಿಶೀಲಿಸಿದ್ದಾರೆ. ಕೃಷಿ ಅಧಿಕಾರಿ ಕೊರವರ ಭೀರಪ್ಪ ಈ ಸಂದರ್ಭದಲ್ಲಿ ಬೆಳೆ ವಿಮೆ ಮಾಡಿಸಬೇಕು, ವಿಮೆ ಮಾಡಿಸಿದರೆ ಇಂತಹ ಸಂದರ್ಭದಲ್ಲಿ ಅನುಕೂಲವಾಗುತ್ತದೆ ಎಂದು ಸಲಹೆ ನೀಡಿದರು.

ಬೆಣ್ಣಿಹಳ್ಳಿಯಲ್ಲಿ ಒಂದು ಮನೆ ಭಾಗಶಃ ಬಿದ್ದಿದೆ, ಹರಪನಹಳ್ಳಿಯಲ್ಲಿ -34.2 ಮಿಮೀ, ಅರಸಿಕೇರಿ -30.3 ಮಿಮೀ, ಚಿಗಟೇರಿ -16 ಮಿಮೀ, ಹಿರೇಮೇಗಳಗೇರಿ -19.2 ಮಿಮೀ, ಉಚ್ಚಂಗಿದುರ್ಗ -34.6ಮಿಮೀ, ತೆಲಿಗಿ -4.6 ಮಿಮೀ, ಹಲುವಾಗಲು -16.2 ಮಿಮೀ ಮಳೆಯಾಗಿದೆ.

## ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ವ್ಯತ್ಯಯ


ಹಲಗೇರಿ ರಸ್ತೆ ಅಗಲೀಕರಣದ ಪ್ರಯುಕ್ತ ಇಂದು ವಿದ್ಯುತ್ ಸರಬರಾಜು ನಿಲುಗಡೆಯಾಗಲಿದೆ.

ಗೂಡ್ಸ್ ಶೆಡ್ ರೋಡ್, ಹಲಗೇರಿ ರೋಡ್, ಎಂ.ಜಿ. ರೋಡ್, ಸ್ಟೇಷನ್ ರೋಡ್, ರಂಗನಾಥ ನಗರ, ದೊಡ್ಡಪೇಟೆ, ಜನತಾ ಬಜಾರ್, ಹನಗೋಡಿ ಓಣಿಗಳಲ್ಲಿ ಅಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಇರುವುದಿಲ್ಲ.

## ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ ಗಳಿಸಿದ ಶಿಕ್ಷಕಿ ಓಂಕಾರಮ್ಮ



ದಾವಣಗೆರೆ ಜೂ. 3 - ಬೆಂಗಳೂರಿನಲ್ಲಿ ನಡೆದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟದ ಕುಸ್ತಿ ಪಂದ್ಯದಲ್ಲಿ ನಗರದ ಮೋತಿ ವೀರಪ್ಪ ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಶ್ರೀಮತಿ ಓಂಕಾರಮ್ಮ ಎ.ಜಿ. ಅವರು ಪ್ರಥಮ ಸ್ಥಾನ ಗಳಿಸಿ, ದೆಹಲಿಯಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.




ಜೋಕರ್‌ನ ಹಾಸ್ಯ, ರಿಂಗ್‌ನೊಳಗೆ ಬಂಧಿಯಾಗುವ ಬಾಲಕಿ, ಮೈನವಿರೇಳಿಸುವ ಯುವಕನ ಕಸರತ್ತು, ನಡುನಡುವೆ ಶ್ವಾನಗಳ ಚಮತ್ಕಾರ. ಇದು, ದಾವಣಗೆರೆಯ ಹದಡಿ ರಸ್ತೆಯಲ್ಲಿ ನಡೆಯುತ್ತಿರುವ ಸರ್ಕಸ್‌ನಲ್ಲಿನ ಸಾಕ್ಷಾತ್ಕಾರ.

## ನಗರಕ್ಕೆ ನಾಗಪ್ಪ ವಜ್ಜಲ್ - ಆತ್ಮೀಯ ಸ್ವಾಗತ



ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷರಾದ ಶ್ರೀ ಮಾನಪ್ಪ ವಜ್ಜಲ್ ಅವರ ಸೋದರ ಶ್ರೀ ನಾಗಪ್ಪ ವಜ್ಜಲ್ ಅವರು ದಿನಾಂಕ 03.06.2022ರಂದು ದಾವಣಗೆರೆ ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ಬಿಜೆಪಿ ಹಿರಿಯ ಮುಖಂಡರಾದ ಬಿ.ಟಿ. ಸಿದ್ದಪ್ಪ ಹಾಗೂ ಅವರ ಪುತ್ರರೂ ಆದ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಿಜೆಪಿ ಪ್ರಬಲ ಆಕಾಂಕ್ಷಿ ಜಿ.ಎಸ್. ಶ್ಯಾಮ್ ಅವರು ತಮ್ಮ ಕುಟುಂಬದ ಕಾರ್ಯಕ್ರಮಕ್ಕೆ ಆತ್ಮೀಯವಾಗಿ ಬರಮಾಡಿಕೊಂಡರು.

## ದ್ವಿತೀಯ ವರ್ಷದ ಪುಣ್ಯಸ್ಮರಣೆ



**ಶ್ರೀ ಬಿ. ಓಬಯ್ಯ**

ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಇನ್ಸ್‌ಪೆಕ್ಟರ್ 18ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು. ನಿಮ್ಮ ನೆನಪು, ನಿಮ್ಮ ಶ್ರೇಷ್ಠ ಸಂಸ್ಕಾರ, ಶಿಸ್ತು, ಆದರ್ಶ ನಮ್ಮೆಲ್ಲರ ಪಾಲಿಗೆ ದಾರಿ ದೀಪವಾಗಿದೆ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ ಸದಾ ನಿಮ್ಮ ಸ್ಮರಣೆಯಲ್ಲಿರುವ...

ಧರ್ಮ ಪತ್ನಿ : ಶ್ರೀಮತಿ ಜಯ್ಯಮ್ಮ

ಗಂಡು ಮಕ್ಕಳು ಮತ್ತು ಸೊಸೆಯಂದಿರು : ಶ್ರೀಮತಿ ಶಾಂತಾ ಬಿ. ಮಂಜುನಾಥ್ ಶ್ರೀಮತಿ ಪಂಕಜಾ ಬಿ. ವಿಶ್ವನಾಥ್, ಶ್ರೀಮತಿ ಕವಿತಾ ಬಿ. ಶ್ರೀನಿವಾಸ್

ಹೆಣ್ಣು ಮಕ್ಕಳು ಮತ್ತು ಅಳಿಯಂದಿರು : ಶ್ರೀಮತಿ ಶೋಭಾ ಶ್ರೀ ಗುರುಸ್ವಾಮಿ ಶ್ರೀಮತಿ ತ್ರಿವೇಣಿ, ಶ್ರೀ ಮಾರುತಿ ನಾಯ್ಕ್, ಶ್ರೀಮತಿ ಪುಷ್ಪಲತಾ ಶ್ರೀ ರಾಜೇಂದ್ರಕುಮಾರ್

ಮೊಮ್ಮಕ್ಕಳು : ನಂದನ್, ವಿನಾಯಕ, ಪ್ರತೀಕ್, ಹರ್ಷ, ಯುಕ್ತಾ, ಸ್ವಾತಿ, ಸಾಗರ್ ಮೋನಿಷ್, ರೋಹನ್ ಹಾಗೂ ಬಂಧು-ಮಿತ್ರರು, ದಾವಣಗೆರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಟಿ.ಸಿ ಲೇಔಟ್, ಎಲ್‌ಐಸಿ ಆಫೀಸ್, ಕೆ.ಆರ್. ರಸ್ತೆ, ಜಗಳೂರು ಬಸ್‌ಸ್ಟಾಪ್, ಅರಳಿಮರ ಸರ್ಕಲ್, ನೂರಾನಿ ಆಟೋ ಸ್ಟ್ಯಾಂಡ್, ವೆಂಕಟೇಶ್ವರ ದೇವಸ್ಥಾನದ ಪಕ್ಕ, ಆನೆಕೊಂಡ ಹೊಸ ಲೇಔಟ್, ಉರ್ದು ಸ್ಕೂಲ್ ಹಿಂಭಾಗ, ಆಜಾದ್‌ನಗರ 10 ರಿಂದ 16ನೇ ಕ್ರಾಸ್‌ವರೆಗೆ, ಅಕ್ಸಾ ಮಸೀದಿ ಹಿಂಭಾಗ, ಬೀಡಿ ಲೇಔಟ್, ಆಜಾದ್ ನಗರ ಪೊಲೀಸ್ ಸ್ಟೇಷನ್, ಹೆಗಡೆ ನಗರ, ರಜಾವುಲ್ಲಾ ಮುಸ್ತಾಫ ನಗರ ಸ್ವಲ್ಪಭಾಗ, ಅಮ್ಮಜಾನ್, ಬಾಬಾಜಾನ್, ಜೋಗಲ್‌ಬಾಬಾ ಲೇಔಟ್, ಮಾಗಾನಹಳ್ಳಿ ರಸ್ತೆ ಹಳ್ಳದವರೆಗೆ, ಜಗಳೂರು ರಸ್ತೆ ಎಆರ್‌ಬಿ ಮಿಲ್, ಚಾಮರಾಜಪೇಟೆ, ವಾಟರ್ ಟ್ಯಾಂಕ್, ಎಸ್.ಎಸ್ ಆಸ್ಪತ್ರೆ, ಅರಳಿಮರದ ಸರ್ಕಲ್, ಬೇತೂರು ರಸ್ತೆ, ಚರ್ಚ್ ರಸ್ತೆ, ಮುನ್ಸಿಪಲ್ ಕಾಲೇಜ್, ಕೊಹಿನೂರ್ ಹೋಟೆಲ್ ಹಿಂಭಾಗ, ಮಾಗಾನಹಳ್ಳಿ ರಸ್ತೆ, ಹಾಸಬಾವಿ ಸರ್ಕಲ್, ಮಿಲ್ಲತ್ ಸ್ಕೂಲ್ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು, ರೆಹಮಾನ್ ರಸ್ತೆ, ಮಂಡಕ್ಕಿ ಭಟ್ಟಿ 1ನೇ ಕ್ರಾಸ್‌ನಿಂದ 10ನೇ ಕ್ರಾಸ್‌ವರೆಗೆ, ರಿಂಗ್ ರಸ್ತೆ, ಸಿದ್ದರಾಮೇಶ್ವರ ಬಡಾವಣೆ, ಕಾರ್ಲ್‌ಮಾರ್ಕ್ಸ್ ನಗರ, ದೇವರಾಜ್ ಕ್ವಾರ್ಟಸ್ (ಬೇತೂರ್ ರಸ್ತೆ) ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಸೇವಾ ವಲಯದಲ್ಲಿ 11 ವರ್ಷಗಳಲ್ಲೇ ಹೆಚ್ಚಿನ ಬೆಳವಣಿಗೆ

ನವದೆಹಲಿ, ಜೂ. 3 – ದೇಶದ ಸೇವಾ ವಲಯ ಮೇ ತಿಂಗಳಲ್ಲಿ 11 ವರ್ಷಗಳಲ್ಲೇ ಅತಿ ಹೆಚ್ಚಿನ ಬೆಳವಣಿಗೆ ಕಂಡಿದೆ. ಹಣದುಬ್ಬರ ದಾಖಲೆ ಮಟ್ಟದಲ್ಲಿದ್ದರೂ ಈ ಬೆಳವಣಿಗೆಯಾಗಿದೆ.

ಎಸ್‌ಅಂಡ್‌ಪಿ ಗ್ಲೋಬಲ್ ಇಂಡಿಯಾ ಸರ್ವೀಸಸ್ ಪಿ.ಎಂ.ಐ. ಸೂಚ್ಯಂಕ ಮೇ ತಿಂಗಳಲ್ಲಿ ಶೇ.58.9ರಷ್ಟಿತ್ತು. ಏಪ್ರಿಲ್‌ನಲ್ಲಿ 57.9ರಷ್ಟಿತ್ತು.

ಸತತ ಹತ್ತು ತಿಂಗಳಿನಿಂದ ಸೇವಾ ವಲಯ ವಿಸ್ತಾರವಾಗುತ್ತಿದೆ. ಪಿ.ಎಂ.ಐ. ಸೂಚ್ಯಂಕ 50ಕ್ಕಿಂತ ಹೆಚ್ಚಾಗಿರುವುದು ಬೆಳವಣಿಗೆ ತೋರಿಸುತ್ತದೆ. ಅದಕ್ಕಿಂತ ಕಡಿಮೆ ಇದ್ದರೆ ಕುಸಿತ ಎಂದು ಪರಿಗಣಿಸಲಾಗುತ್ತಿದೆ. ದೇಶದಲ್ಲಿ ಸೇವಾ ವಲಯಕ್ಕೆ ಹೆಚ್ಚಿನ ಬೇಡಿಕೆ ಇದೆ. ಆದರೆ, ವಿದೇಶಗಳಿಂದ ಬರುವ ಬೇಡಿಕೆ ಈಗಲೂ ಮಂದವಾಗಿದೆ ಎಂದು ಅಂಕಿ ಅಂಶಗಳು ತಿಳಿಸಿವೆ.

## ಬಸ್‌ಪಾಸ್ ವಿತರಣೆಗೆ ಆನ್‌ಲೈನ್ ಅರ್ಜಿ

ದಾವಣಗೆರೆ, ಜೂ. 3 -ಕ.ರಾ.ರ.ಸಾ. ನಿಗಮ ದಾವಣಗೆರೆ ವಿಭಾಗದಿಂದ ವಿದ್ಯಾರ್ಥಿ ಉಚಿತ/ರಿಯಾಯಿತಿ ಬಸ್‌ಪಾಸ್‌ಗಳನ್ನು ಮೇ 23 ರಿಂದ ವಿತರಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ ಬಸ್‌ಪಾಸ್‌ಗೆ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸುವಾಗ ಸಂಬಂಧಪಟ್ಟ ದಾಖಲೆಗಳನ್ನು ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

## ಸ್ಕೇಟಿಂಗ್ : ಪ್ರಥಮ್‌ಗೆ ಪದಕ



ದಾವಣಗೆರೆ, ಜೂ.3- ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿ ನಡೆದ 35ನೇ ರಾಷ್ಟ್ರಮಟ್ಟದ ರೋಲರ್ ರಿಲೇ ಸ್ಕೇಟಿಂಗ್‌ನಲ್ಲಿ ನಗರದ 3ನೇ ತರಗತಿ ವಿದ್ಯಾರ್ಥಿ ಹೆಚ್. ಪ್ರಥಮ್ 8-10 ವರ್ಷಗಳ ವಯೋಮಿತಿಯ ರಿಲೇ ಸ್ಕೇಟಿಂಗ್ ವಿಭಾಗದಲ್ಲಿ ಬೆಳ್ಳಿ ಪದಕ ಹಾಗೂ ಸ್ಪೀಡ್ ಸ್ಕೇಟಿಂಗ್‌ನಲ್ಲಿ ಕಂಚಿನ ಪದಕ ಪಡೆದಿದ್ದಾರೆ.

## ಎಸ್.ಜಿ.ಉಳುವಯ್ಯ ಅವರಿಗೆ ಸನ್ಮಾನ



ದಾವಣಗೆರೆ, ಜೂ.3- ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ಮೊನ್ನೆ ನಡೆದ ಧರ್ಮ ಸಮಾರಂಭದಲ್ಲಿ ನಗರದ ಲಯನ್ಸ್ ಕ್ಲಬ್ ಉಪಾಧ್ಯಕ್ಷರೂ, ದಾವಣಗೆರೆ ಕ್ಲಬ್ ಜಂಟಿ ನಿರ್ದೇಶಕರೂ ಆದ ಎಸ್.ಜಿ. ಉಳುವಯ್ಯ ಅವರಿಗೆ 'ದಾನ ಸೇವಾ ರತ್ನಾಕರ' ಬಿರುದು ನೀಡಿ ಸನ್ಮಾನಿಸಲಾಯಿತು.

ಶ್ರೀ ಒಡೆಯರ ಶಿವಪ್ರಕಾಶ ಶಿವಾಚಾರ್ಯ ಮಹಾಸ್ವಾಮಿಗಳವರ ಪಟ್ಟಾಧಿಕಾರದ ರಜತ ಮಹೋತ್ಸವದ ಸಂದರ್ಭದಲ್ಲಿ ಏರ್ಪಾಡಾಗಿದ್ದ ಬಸವ ಪುರಾಣದ ವೇದಿಕೆಯಲ್ಲಿ ದಾನಿಯೂ ಆಗಿರುವ ಎಸ್.ಜಿ. ಉಳುವಯ್ಯ ಮತ್ತು ಶ್ರೀಮತಿ ಸುನಂದ ದಂಪತಿಯನ್ನು ಗೌರವಿಸಲಾಯಿತು.

ಶ್ರೀ ಮದ್ ಉಜ್ಜಯಿನಿ ಜಗದ್ಗುರುಗಳು, ಶ್ರೀಶೈಲ ಜಗದ್ಗುರುಗಳು, ಶ್ರೀ ಕಾಶಿ ಜಗದ್ಗುರುಗಳು, ವಿವಿಧ ಮಠಾಧೀಶರು, ಶರಣರು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.


4ನೇ ಜೂನ್ ರಿಂದ ಭರ್ಜರಿ ಶುಭಾರಂಭ

ದಾವಣಗೆರೆ ನಾಗರಿಕರಿಗೆ ನಂಬಲಸಾಧ್ಯವಾದ ಮಾರಾಟ

ಅತಿ ದೊಡ್ಡ ರಿಯಾಯಿತಿ ಸಮ್ಮರ್ ಮಾರಾಟ

ಕಂಪನಿಯಿಂದ ನೇರವಾಗಿ ಗ್ರಾಹಕರಿಗೆ

ಬ್ರಾಂಡೆಡ್ ರೆಡಿಮೇಡ್ ಉಡುಪುಗಳ ಬೃಹತ್ ಸ್ಟಾಕ್‌ನಿಂದಾಗಿ ಗೋದಾಮಿನಲ್ಲಿ ಸಂಗ್ರಹವಾಯಿತು. ಇದು ಕಂಪನಿಯು ಆರ್ಥಿಕ ಬಿಕಟ್ಟಿನ ಕಡೆಗೆ ಎದುರಿಸಿತು, ಆದ್ದರಿಂದ ಕಂಪನಿಯು ದಾವಣಗೆರೆ ಗ್ರಾಹಕರಿಗೆ ಭಾರಿ ರಿಯಾಯಿತಿ ನೀಡಲು ನಿರ್ಧರಿಸಿದೆ 3 ಕೋಟಿ ರೂಪಾಯಿಗಳ ರೆಡಿಮೇಡ್ ಉಡುಪುಗಳನ್ನು ಈಗ ಕೇವಲ 60 ಲಕ್ಷಕ್ಕೆ ನಗದು ರೂಪದಲ್ಲಿ ಮಾರಾಟ ಮಾಡಲು ನಿರ್ಧರಿಸಿದೆ ಮತ್ತು 4 ದಿನಗಳಲ್ಲಿ ಬಾಕಿ ಸರಕನ್ನು ಮಾರಾಟ ಮಾಡಲಾಗುವುದು.

ಹೋಟೆಲ್ ಹೋಟೆಲ್ ಸದರ್ನ್ ಸ್ಟಾರ್, ದಾವಣಗೆರೆ ಸೇಲ್ 4 ದಿನಗಳು.

Sincere Request : To the customers to maintain silence during shopping

1,000 ವಿವಿಧ ಪ್ರಕಾರದ ಜಂಟ್ಸ್, ಲೇಡಿಸ್ ಮತ್ತು ಕಿಡ್ಸ್ ಪ್ಯಾಂಟ್, ಟೀ-ಶರ್ಟ್, ಲೋವರ್, ಟಾಪ್, ಬರ್ಮುಡಾ, ಕೇಪ್ರಿ, ಪ್ಲಾಜೊ, ಇತರೆ

ಕೇವಲ ರೂ. 200/- ರಿಂದ 350/- ರವರೆಗೆ

ಬಿಗ್ ಬ್ರಾಂಡ್ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್ : MRP : 1499/- to 4999/-

ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್ : ಸಿಲ್ಕ್‌ಸ್ಟ್ರೀಚ್, ಮಸ್‌ರೈಸ್ ಸ್ಟ್ರೆಚ್, ಸ್ಟ್ರೆಚ್ ಚಿನ್ನೂಸ್ ಕಾಟನ್, ಸಾರ್ಟಿನ್ ಸ್ಟ್ರೆಚ್ ಇತ್ಯಾದಿ.

ಶರ್ಟ್, ಟಿ-ಶರ್ಟ್ : ಪಾರ್ಟಿವೇರ್, ಬಿಸ್‌ನೆಸ್‌ಕ್ಲಾಸ್, ಆಫೀಸ್‌ವೇರ್, ಫಾರ್ಮಲ್, ಕ್ಯಾಷುಯಲ್ ಇತ್ಯಾದಿ.

INDIAN TERRAIN ColorPlus DANIEL HECHTER Lee Pepe Jeans IZOD NETPLAY INDIGO NATION SCULLERS

Only in Rs. 499/- to 999/-

ಬ್ರಾಂಡೆಡ್ ಲೇಡಿಸ್ ಕುರ್ತಿಸ್ ಮೇಳಾ, ಕುರ್ತಿ ಮತ್ತು ಪಶ್ಚಿಮಾತ್ಯ ಬಟ್ಟೆಗಳು

BIBA JACK&JONES DNMX AJIO ELINI abof avaasa MRP Up to Rs. 4999/-

Only in Rs. 200 /-, 400/- & 600/-

ಬಿಗ್ ಬ್ರಾಂಡ್ ಕಿಡ್ಸ್ ಮೇಳ MRP upto Rs.1999/-

ಹುಡಗಿಯರ : ಟಾಪ್, ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಫ್ಯಾನ್ಸಿ ಫ್ರಾಕ್, ಫ್ಯಾನ್ಸಿ ಡ್ರೆಸ್, ಪುಲೋವರ್, ಜಾಕೆಟ್ ಇತ್ಯಾದಿ ಹುಡುಗರ : ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಶರ್ಟ್, ಟೀ-ಶರ್ಟ್, ಪುಲೋವರ್, ಫ್ಯಾನ್ಸಿ ಡ್ರೆಸ್, ಜಾಕೆಟ್ ಇತ್ಯಾದಿ

wow mom ಕೇವಲ ರೂ: 150/- ರಿಂದ 499/- ಮಾತ್ರ Size 1 Month to 12 Years Disney


BIG OFFER Rajasthani Royal Printed Bedsheets , Pillow cover, Sofa cover etc

JACK&JONES NETWORK Big Branded BLAZER MRP upto Rs. 11,999/-

Now Sale in only Rs. 999/-to 1999/-

Note : 1 This sale is only for Retail customers Just for 4 days. 2 Wholesale Dealers will not be entertained. 3 We are selling on Such low prices just to collect cash.

ಆಫರ್ 4 ದಿನಗಳು ಮಾತ್ರ 4 5 6 ಮತ್ತು 7 ಜೂನ್ 2022 ಸಮಯ: 10 am to 9 pm NO LUNCH BREAK



ಹೋಟೆಲ್ ಸದರ್ನ್ ಸ್ಟಾರ್

(ಶಾಮನೂರು ಶಿವಶಂಕರಪ್ಪ ಕನ್ವೆನ್‌ಷನ್ ಸೆಂಟರ್)

# 3993/23, ಶಾಮನೂರು ರೋಡ್, ಎಸ್.ಎಸ್. ಲೇಔಟ್, ಎ ಬ್ಲಾಕ್, ಕುವೆಂಪು ನಗರ ದಾವಣಗೆರೆ-577004

HOTEL SOUTHERN STAR (Shamanur Shivashankarappa Convention Centre)

#3993/23, Shamanur Road, SS Layout A Block, Kuvempu Nagar, DAVANGERE-577 004

FREE PARKING ENTRANCE

All Major Debit / Credit Cards. Google Pay, PhonePe Accepted

As per Govt. Rules Please Wear Mask & Maintain Scoial Distance


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte